866666

ಕಲ್ಯಾಣ ಕಿರಣ

ಮಾರ್ಚ್ 2011

ಬೆಲೆ : 10/-





ಪೂಜ್ಯ ಮಾತಾಜಿಯವರಿಗೆ ಆರತಿ



ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ
ಪ್ರಧಾನ ಕಾರ್ಯದರ್ಶಿ ಡಾ॥ ಶಾಲಿನಿ ರಜನೀಶ್ ಅವರಿಂದ
ರಾಷ್ಟ್ರೀಯ ಭಾವೈಕ್ಯತಾ ಗೋಷ್ಠಿಯ ಉದ್ಘಾಟನೆ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-41	ಬಸವ ಶಕೆ -877	ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-03	ಮಾರ್ಚ್ - 2011	ವಾರ್ಷಿಕ ಚಂದಾ 100 ರೂ.

ಜೋ ಜೋ ಮಾತೆ ಮಹಾದೇವಿ ತಾಯಿಯೆ

ಜೋ ಜೋ ಮಾತೆ ಮಹಾದೇವಿ ತಾಯಿಯೆ
ಜೋ ಜೋ ಗುರು-ಭಕ್ತರ ಸಿರಿ ದೇವಿಯೆ
ಜೋ ಜೋ ಶರಣರ ಮುದ್ದು ಕಣ್ಮಣಿಯೆ
ಜೋಯೆಂದು ಪಾಡುವೆ ಜಗದ ಜನನಿಯೇ ಜೋ ಜೋ ॥ಪ॥

ಅರವತ್ತೈದು ವರ್ಷ ತುಂಬಿತು ಇಂದು
ಅರವತ್ತಾರು ವರ್ಷಕ್ಕೆ ಕಾಲಿಟ್ಟರಿಂದು
ವೈರಾಗ್ಯ ಪರಿಮಳ ಸೂಸುತ ಬಂದು
ಕಲ್ಯಾಣ ಶರಣರ ಜ್ಯೋತಿ ಬೆಳಗುತ ಮುಂದು ಜೋ ಜೋ ॥1॥

ಹತ್ತೊಂಬತ್ತು ವರ್ಷದ ತುಂಬು ಯೌವನದಿ
ಮನೆ ಬಿಟ್ಟು ಹೊರಟರು ಲೋಕ ಕಲ್ಯಾಣಕೆ
ಭರದಿಂದ ತೊರೆದರು ಸಂಸಾರ ವ್ಯಾಮೋಹ
ವಿಶ್ವ ಕಲ್ಯಾಣ ಮಂಟಪಕೆ ಬಂದರು ಭರದಿ ಜೋ ಜೋ ॥2॥

ಶರಣರ ಮಗಳು ಮಾತೆ ಮಹಾದೇವಿ
ಯೋಗಿಣಿಯಾಗಿ ಬೆಳಗುವಳು ತಾಯಿ
ಅಕ್ಕನ ಅವತಾರಿಯಾಗಿಹಳು ದೇವಿ
ಶ್ರೀ ಗುರು ಲಿಂಗಾನಂದರೆ ತೆತ್ತಿಗರಾಗಿ ಜೋ ಜೋ ॥3॥

ಧರಣಿಯ ಮೇಲ್ಹುಟ್ಟಿ ಹರದೇವಿಯಿಂದು
ಹರಪೂಜೆಗೈಯುತ ಗುರುದೇವಿ ಬಂದು
ಕೈ ಹಿಡಿದು ಕರೆಯುತ ಧರೆಯ ಮಕ್ಕಳನ್ನು
ಮೂಲ ಮಂತ್ರವ ಹೇಳಿ ಮುಕ್ತ ಮಾಡುವರು ಜೋ ಜೋ ॥4॥

ಹುಟ್ಟುತ ಮರುಗದ ಗಿಡವಾಗಿ ಬೆಳೆದು
ಬೆಳೆಯುತ ಗಂಧದ ಕೊರಡಾಗಿ ಸವೆದು
ಜ್ಞಾನದ ಬೆಳಕನು ಬೀರುತ ನಡೆದು
ಪಾರ್ವತಿಯ ಅಂಶದಿ ಭೂಮಿಗೆ ಇಳಿದು ಜೋ ಜೋ ॥5॥

ಅಂಗದ ಸುಖವನು ತೊರೆದು ನಿಂತಿಹರು
ಲಿಂಗದ ನೆನಹಿನೊಳಗೆ ಬೆರೆತು ಕೂಡಿಹರು
ಜೀವನ ದೇವಗೆ ಅರ್ಪಣ ಮಾಡಿಹರು
ಜಗದೀಶ ಸಚ್ಚಿದಾನಂದನ ಶಕ್ತಿಯಾಗಿಹರು ಜೋ ಜೋ ॥6॥

ರಚನೆ : ಶರಣೆ ಕಮಲಮ್ಮ ಗೋಧಿ, ಧಾರವಾಡ

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಮಾರ್ಚ್ -ಏಪ್ರಿಲ್ ತಿಂಗಳಲ್ಲಿ ಬರುವ ಹಬ್ಬ -ಹುಣ್ಣಿಮೆ -ಉತ್ಸವಗಳು

1.	ಶಿವರಾತ್ರಿ, ಗಣ ಮೇಳ	ಮಾರ್ಚ್ - 2
2.	ಪೂಜ್ಯ ಶ್ರೀ ಮಾತಾಜಿಯವರ ವರ್ಧಂತಿ	ಮಾರ್ಚ್- 13
3.	ಅಲ್ಲಮಪ್ರಭು ಜಯಂತಿ (ಯುಗಾದಿ)	ಏಪ್ರಿಲ್ -4
4.	ಮಹಾರಾಷ್ಟ್ರದ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳಾವ	ಏಪ್ರಿಲ್-4,5 ಮತ್ತು 6
5.	ಅಕ್ಕಮಹಾದೇವಿ ಜಯಂತಿ	ಏಪ್ರಿಲ್ - 18
6.	ಧಾರವಾಡದಲ್ಲಿ ಶರಣೋತ್ಸವ	ಏಪ್ರಿಲ್ 30, ಮೇ 1, 2

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 8970898205, 7760627640, 8892912123



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666



ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಳತೆ ಗ್ರಾಮದ ಅಲ್ಲಮ ಪ್ರಭು ಗಿರಿಯಲ್ಲಿ 2011ರ ಏಪ್ರಿಲ್ 4,5 ಮತ್ತು 6 ರಂದು ಆರನೆಯ ಲಿಂಗಾಯತ ಗಣಮೇಳ

ಶರಣ ಬಂಧುಗಳಲ್ಲಿ ಶರಣು ಶರಣಾರ್ಥಿ,

ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಅನುಭವ ಮಂಟಪ ಎಂಬ ಆಧ್ಯಾತ್ಮಿಕ ಸಂಸ್ಥೆಯನ್ನು ಕಟ್ಟಿ, ಅದರಲ್ಲಿ ಶೂನ್ಯಪೀಠ ಎಂಬ ಧರ್ಮಪೀಠವನ್ನು ಸ್ಥಾಪಿಸಿ ಅದಕ್ಕೆ ವ್ಯೋಮಕಾಯ ಸಿದ್ಧರಾದ ಅಲ್ಲಮ ಪ್ರಭುದೇವರನ್ನು ಮೊದಲನೆಯ ಅಧಿಕಾರಿಯನ್ನಾಗಿ ಪೀಠಾರೋಹಣ ಮಾಡಿಸಿದರು. ಶ್ರೀ ಅಲ್ಲಮ ಪ್ರಭುದೇವರು ಮತ್ತು ಸೊಲ್ಲಾಪುರದ ಶ್ರೀ ಸಿದ್ಧರಾಮೇಶ್ವರರು ಧರ್ಮ ಪ್ರಚಾರಾರ್ಥ ಇಂದಿನ ಕರ್ನಾಟಕ, ಮಹಾರಾಷ್ಟ್ರದ ವಿವಿಧ ಸ್ಥಳಗಳಲ್ಲೆಲ್ಲ ಗಂಗೆ-ಯಮುನೆಯರಂತೆ ಸಂಚರಿಸಿ ಭಕ್ತರನ್ನು ಉದ್ಧರಿಸಿದ್ದಾರೆ. ಜೊತೆಗೂಡಿ ಸಂಚರಿಸಿದ ಉಭಯತರೂ ಒಂದು ವಿಶಿಷ್ಟ ಸ್ಥಳದಿಂದ ಪರಸ್ಪರ ಬೀಳ್ಕೊಟ್ಟು ಸಾಭಾರಿ ಜಂಗಮರಾದ ಶ್ರೀ ಸಿದ್ಧರಾಮೇಶ್ವರರು ಸೊಲ್ಲಾಪುರಕ್ಕೆ ಕರ್ತವ್ಯ ಮುಖಿಯಾಗಿ ವಾಪಸ್ಸು ಹೊರಡುತ್ತಾರೆ. ನಿರಾಭಾರಿ ಜಂಗಮರಾದ ಶ್ರೀ ಅಲ್ಲಮ ಪ್ರಭುದೇವರು ಅಶ್ವಾರೋಹಿಯಾಗಿ ಶಿಷ್ಯರೊಡನೆ ಸಂಚಾರವನ್ನು ಮುಂದುವರಿಸುತ್ತಾರೆ. ಒಂದು ಸ್ಥಳದಲ್ಲಿ ತಪೋಮಗ್ನರಾಗಿ ತಂಗಿರುತ್ತಾರೆ. ಅದೇ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಳತೆ ಗ್ರಾಮದ ಬಳಿ ಇರುವ ಅಲ್ಲಮ ಪ್ರಭು ಗಿರಿ. ಮರಾಠಿಯಲ್ಲಿ ಅಲ್ಲಮ ಪ್ರಭು ಡೋಂಗರ್ ಎನ್ನುತ್ತಾರೆ. ಇದು ಕೊಲ್ಹಾಪುರದಿಂದ 25 ಕಿ.ಮೀಟರ್ ದೂರದಲ್ಲಿ ಕೊಲ್ಹಾಪುರ -ಸಾಂಗ್ಲಿ-ಸೊಲ್ಲಾಪುರ ಹೆದ್ದಾರಿಯ ಮೇಲಿದೆ. ಸಮೀಪದಲ್ಲಿ ಇಚಲ ಕರಂಜಿ, ಮೀರಜ್, ಸಾಂಗ್ಲಿ ಮತ್ತು ವಡಗಾಂವ ಪಟ್ಟಣಗಳು ಇವೆ. ಮೀರಜ್‌ವರೆಗೆ ರೇಲ್ವೆ ಸೌಲಭ್ಯವಿದೆ. ಪ್ಯಾಸೆಂಜರ್ ರೇಲ್ವೆ ಗಾಡಿಗಳು ಹಾತ್ ಕಣಂಗಲೆ ಮೂಲಕ ಕೊಲ್ಹಾಪುರಕ್ಕೆ ಹೋಗುತ್ತವೆ ಮತ್ತು ಹಾತ್‌ಕಣಂಗಲೆಯಲ್ಲಿ ನಿಲ್ಲುತ್ತವೆ.

ಅಲ್ಲಮ ಪ್ರಭು ನಂದಾದೀಪ

ಶ್ರೀ ಅಲ್ಲಮ ಪ್ರಭುದೇವರು ಪೂಜೆಯ ಸಮಯದಲ್ಲಿ ಹಚ್ಚಿದ ಜ್ಯೋತಿಯನ್ನು ಅಲ್ಲಮ ಪ್ರಭು ಶರಣಾಲಯದ ಪೂಜಾರಿ ವಂಶಸ್ಥರು ನಂದಾದೀಪವಾಗಿ ಕಾಯ್ದುಕೊಂಡು ಬಂದಿರುವುದು ಸ್ಥಳ ವಿಶೇಷ. ಶ್ರೀ ಸಿದ್ಧರಾಮೇಶ್ವರರ ಶರಣಾಲಯವು ಸಹ ಪಕ್ಕದಲ್ಲೇ ಇದ್ದು ಕೆಲವು ಕಾಲ ಅವರು ಸಹ ಈ ಗಿರಿಯಲ್ಲಿ ತಂಗಿದ್ದಾರೆ. ಈ ಉಭಯತರೂ ಪೂಜೆ-ಧ್ಯಾನಗಳಿಗೆ ಬಳಸುತ್ತಿದ್ದ ಗವಿಯು ಶ್ರೀ ಸಿದ್ಧರಾಮೇಶ್ವರ ಶರಣಾಲಯದ ಕೆಳಗೆ ಇದೆ. ಅಲ್ಲಮ ಪ್ರಭುಗಿರಿಗೆ ಸುಮಾರು 4 ಕಿ.ಮೀ ದೂರದಲ್ಲಿ ಸಿದ್ಧರಾಮೇಶ್ವರ ಗಿರಿ (ಸಿದ್ದೋಬಾ ಡೋಂಗರ್)ಇದ್ದು ಎತ್ತರವಾದ ಆ ಗುಡ್ಡದ ಮೇಲೆ ಸಹ ಸಿದ್ಧರಾಮೇಶ್ವರ ಶರಣಾಲಯವಿದೆ. ಈ ಜಂಗಮ ಕ್ಷೇತ್ರಗಳು ಹೆಚ್ಚಿನ ಪ್ರಚಾರವನ್ನು ಪಡೆಯದೆ ಇರುವುದು ಮತ್ತು ಯಾವುದೇ ವಿಶೇಷ ಅಭಿವೃದ್ಧಿ ಹೊಂದದಿರುವುದು ವಿಷಾದನೀಯ ಸಂಗತಿಯಾಗಿದೆ.

****

ಬಸವ ಧರ್ಮ ಪೀಠದ ಧ್ಯೇಯೋದ್ದೇಶ

ಕೂಡಲ ಸಂಗಮದ ಬಸವ ಧರ್ಮ ಪೀಠ ಟ್ರಸ್ಟ್ ಶರಣರ ಸ್ಥಾನಗಳನ್ನು ಅಭಿವೃದ್ಧಿ ಪಡಿಸುವ ಆಶಯವನ್ನು ಹೊಂದಿದ್ದು ಅಲ್ಲಮ ಪ್ರಭು ಗಿರಿ(ಡೋಂಗರ್)ಯಲ್ಲಿ ಜಗದ್ಗುರು ಅಲ್ಲಮಪ್ರಭು ಶರಣಾಲಯಕ್ಕೆ ಹತ್ತಿರದಲ್ಲಿ 14 ಎಕರೆಯಷ್ಟು ಜಮೀನನ್ನು ಖರೀದಿಸಿದೆ. ಬೋರ್ ವೆಲ್,ನೀರಿನ ತೊಟ್ಟಿ, ಕಾರ್ಯಾಲಯ (Office)ಮತ್ತು ವಾಸಕ್ಕೆ 3 ಕೊಠಡಿ, ಒಂದು ಹಾಲ್ ಸಹ ಕಟ್ಟಿಸಲಾಗಿದೆ. ಈ ಸದ್ಯ ಪ್ರತಿ ಅಮವಾಸ್ಯೆಯಂದು ಶರಣ ಸಂಗಮ -ಪ್ರಾರ್ಥನೆ ಮತ್ತು ಅನುಭವ ಗೋಷ್ಠಿಯನ್ನು ನಡೆಸಲಾಗುತ್ತಿದ್ದು ಸುತ್ತಲಿನ ಪ್ರದೇಶದಿಂದ ಶರಣ ಬಂಧುಗಳು ಅಲ್ಲಮ ಗಿರಿಗೆ ಬರುತ್ತಾರೆ. ಮುಂದೆ ವಿಸ್ತಾರವಾದ ಕಾರ್ಯ ಯೋಜನೆಯ ಮಾಸ್ಟರ್ ಪ್ಲಾನ್ ಪ್ರಕಟಿಸ ಲಾಗುವುದು. ಮತ್ತು ಕಟ್ಟಡ ನಿಧಿಗೆ, ದಾಸೋಹ ನಿಧಿಗೆ ದೇಣಿಗೆಯನ್ನು ಸಂಗ್ರಹಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳಿಂದ
ಅಲ್ಲಮಪ್ರಭು ಯೋಗ ಪೀಠಾರೋಹಣ ಸಂಜೆ 5ಕ್ಕೆ

ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು ಮತ್ತು ಕಾಯಕ ಯೋಗಿ ಸಿದ್ಧರಾಮೇಶ್ವರರು ಪಾದವಿಟ್ಟ ಈ ಜಂಗಮ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕೆಂದು, ಲಿಂಗಾಯತ ಸಮಾಜದ ಸಂಘಟನೆ ಯ ದೃಷ್ಟಿಯಿಂದ ಮಹಾರಾಷ್ಟ್ರದಲ್ಲಿ ಬಸವ ಧರ್ಮಪೀಠದ ಶಾಖೆಯೊಂದನ್ನು ಹೊಂದು ವುದು ತೀರಾ ಅತ್ಯಗತ್ಯ ಎಂಬ ಮಹಾರಾಷ್ಟ್ರ ಶರಣ ಬಂಧುಗಳ ಬೇಡಿಕೆಯಂತೆ 2006ನೇ ಇಸವಿಯ ಚೈತ್ರ ಶುದ್ಧ ಪ್ರತಿಪದೆ ಯುಗಾದಿಯ ದಿನ ಅಲ್ಲಮಪ್ರಭು ಪೀಠಾರೋಹಣ ಸಂಸ್ಮರಣ ದಿನಕ್ಕೆ ಹೊಂದಿಕೊಂಡು ಮಾರ್ಚ್ ತಿಂಗಳಿನ 29 ಮತ್ತು 30ನೆಯ ದಿನಾಂಕಗಳಂದು ಪ್ರಥಮ ಲಿಂಗಾಯತ ಗಣ ಮೇಳವನ್ನು ಏರ್ಪಡಿಸಲಾಯಿತು.

ಕೂಡಲ ಸಂಗಮದ ಬಸವ ಧರ್ಮಪೀಠ, ಮಹಾರಾಷ್ಟ್ರ ರಾಷ್ಟ್ರೀಯ ಬಸವ ದಳಗಳ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಅಲ್ಲಮ ಪ್ರಭು ಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ನಡೆಸ ಲಾಗುವುದು. ದಿ.04-3-2011 ಬೆಳಿಗ್ಗೆ 10.30ಕ್ಕೆ -ಉದ್ಘಾಟನೆ, ಮಧ್ಯಾಹ್ನ - ಚಿಂತನಗೋಷ್ಠಿ, ಸಂಜೆ -ಪ್ರವಚನ, ಸಾಮೂಹಿಕ ಕೀರ್ತನ(ಭಜನೆ),ಅಲ್ಲಮಪ್ರಭು ತೊಟ್ಟಿಲು ಕಾರ್ಯಕ್ರಮ ಮಂಗಳವಾರ ದಿ.05-3-11ರಂದು ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ, ಬೆಳಿಗ್ಗೆ 10-30ರಿಂದ ಸಮುದಾಯ ಪ್ರಾರ್ಥನೆ - ಸಿದ್ಧರಾಮೇಶ್ವರ ಗಿರಿಯಿಂದ ಜ್ಯೋತಿಯನ್ನು ತಂದು ತಿರುಗುತ್ತಿಯಿಂದ ಮೆರವಣಿಗೆ ಮೂಲಕ ಗುಡಿಗೆ ಹೋಗಲಾಗುವುದು. ನಂತರ ಅಲ್ಲಮ ಪ್ರಭು ಯೋಗ ಪೀಠಾರೋಹಣ ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳಿಂದ. ಬುಧವಾರ ದಿ.06-3-2011ರಂದು ಬೆಳಿಗ್ಗೆ 10-30 ಕ್ಕೆ ಲಿಂಗಾಯತ ಗಣ ಮೇಳದ ಸಮಾರೋಪ ಸಮಾರಂಭ.

ಸ್ಥಳದ ಹೆಸರು : ಅಲ್ಲಮ ಪ್ರಭು ಗಿರಿ(ಡೋಂಗರ್), ಗ್ರಾಮ: ಅಳತೆ; ಇದು ಕೊಲ್ಹಾಪುರದಿಂದ ಸಾಂಗ್ಲಿಗೆ ಹೋಗುವ ದಾರಿಯ ಮೇಲೆ ಕೇವಲ 25 ಕಿ.ಮೀಟರ್ ದೂರದಲ್ಲಿ ಇದೆ. ಸುಪ್ರಸಿದ್ಧ ಕೈಗಾರಿಕಾ ನಗರ ಇಚಲ ಕರಂಜಿಯಿಂದಲೂ 20 ಕಿ.ಮೀಟರ್ ದೂರದಲ್ಲಿದೆ. ಈ ಸ್ಥಳದಿಂದ ಸ್ವಲ್ಪ ದೂರದಲ್ಲಿ ಜೈನರ ಸುಪ್ರಸಿದ್ಧ ಯಾತ್ರಾಸ್ಥಳಗಳಾದ ಕುಂತಗಿರಿ ಮತ್ತು ಬಾಹುಬಲಿ ಬೆಟ್ಟವಿದೆ. ವಡಗಾಂವ ನಗರವೂ ಸಮೀಪದಲ್ಲಿದೆ. ಅಲ್ಲಮ ಪ್ರಭು ಗಿರಿ ಇರುವ ಅಳತೆ ಗ್ರಾಮವು ಹಾತ್‌ಕಣಂಗಲೆ

****

ತಾಲ್ಲೋಕಿನಲ್ಲಿದ್ದು ಹಾತ್‌ಕಣಂಗಲೆಯವರೆಗೆ ರೇಲ್ವೆ ಲೈನ್ ಸೌಲಭ್ಯವಿದೆ. ಪ್ಯಾಸೆಂಜರ್ ಟ್ರೇನ್, ಹರಿಪ್ರಿಯ ಎಕ್ಸ್‌ಪ್ರೆಸ್ ಹಾತ್‌ಕಣಂಗಲೆಯಲ್ಲಿ ನಿಲುತ್ತವೆ. ಹಾತ್‌ಕಣಂಗಲೇ ಬಸ್‌ಸ್ಟಾಂಡ್ ಎದುರಿಗೆ ಉತ್ಸವ ಸಮಿತಿಯ ಕಾರ್ಯಾಲಯ ತೆರೆದಿದ್ದು ಊರಿಂದ ಬಂದವರು ಇಲ್ಲಿ ವಿಶ್ರಮಿಸಿಕೊಂಡು ರಾಮಲಿಂಗಕ್ಕೆ ಹೋಗುವ ರಸ್ತೆಯಲ್ಲಿ ಅಲ್ಲಮಗಿರಿಗೆ ಬರಬಹುದಾಗಿರುತ್ತದೆ. ವಾಹನಗಳ ವ್ಯವಸ್ಥೆ ಇರುತ್ತದೆ.

ಕಾರ್ಯಕ್ರಮದ ಸಮಯದಲ್ಲಿ ಬೆಟ್ಟದ ಮೇಲೆ ವಸತಿ ವ್ಯವಸ್ಥೆಯನ್ನು ತಾತ್ಕಾಲಿಕ ಶಾಮಿಯಾನಾ ಟೆಂಟ್‌ಗಳಿಂದಲೇ ಮಾಡಬೇಕು. ಕೋಣೆಗಳ ವ್ಯವಸ್ಥೆ ಬೇಕಾದವರಿಗೆ ಇಚಲ ಕರಂಜಿ - 20 ಕಿ.ಮೀ ಮತ್ತು ಕೊಲ್ಹಾಪುರ 25 ಕಿ.ಮೀಟರ್ ದೂರದಲ್ಲಿರುವ ನಗರಗಳು. ಅಲ್ಲಿಂದ ಬರಲು ಹೋಗಲು ಬಸ್ ವ್ಯವಸ್ಥೆ ಇರುತ್ತದೆ. ಟೆಂಪೋ ಸಹ ಸಿಗುತ್ತವೆ. ದೂರದ ಊರುಗಳಿಂದ ಬರುವವರು ದಿ. 3ರ ಸಂಜೆಯೊಳಗೆ ಬರಬೇಕೆಂದು, ಹತ್ತಿರದ ಸ್ಥಳಗಳಿಂದ ಬರುವವರು 16ರ ಬೆಳಿಗ್ಗೆ 10-30ಕ್ಕೆ ನಡೆಯುವ ಉದ್ಘಾಟನಾ ಕಾರ್ಯಕ್ರಮಕ್ಕೆ ತಪ್ಪದೆ ಹಾಜರಾಗಬೇಕೆಂದು ವಿನಂತಿಸುತ್ತೇವೆ.

ಧನ ಸಹಾಯಕ್ಕೆ ಮನವಿ

2011ರ ಏಪ್ರಿಲ್ 4, 5 ಮತ್ತು 6ರಂದು ನಡೆಯುವ ಆರನೆಯ ಲಿಂಗಾಯತ ಗಣ ಮೇಳಕ್ಕೆ ಧನ ಸಹಾಯ ಮಾಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಉಪಾಹಾರದ ವೆಚ್ಚ ಭರಿಸುವವರು 15000 (ಹದಿನೈದು ಸಾವಿರ)ರೂಗಳು.

ಮಹಾಪೋಷಕರು	: 10000ರೂ ಮತ್ತು ಮೇಲೆ ಕೊಟ್ಟವರು
ಪೋಷಕರು	: 5000ರೂ ಮತ್ತು ಮೇಲೆ ಕೊಟ್ಟವರು
ಹಿತೈಷಿಗಳು	: 500 ರೂ
ಉತ್ಸವ ಸಮಿತಿ ಸದಸ್ಯರು	250 ರೂ
ದಾನಿಗಳು	: 1000ರೂ ಮತ್ತು ಮೇಲೆ ಕೊಟ್ಟವರು
ಪ್ರತಿನಿಧಿ ಶುಲ್ಕ	150 ರೂ

ಸ್ವಯಂ ಪ್ರೇರಣೆಯಿಂದ ಆವರವರ ಶಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡ ಬಹುದು. ಚೆಕ್ / ಡಿ.ಡಿ ಕಳಿಸುವವರು ಲಿಂಗಾಯತ ಗಣ ಮೇಳ ಉತ್ಸವ ಸಮಿತಿ, ಇಚಲ ಕರಂಜಿ ಶಾಖೆ ಎಂದು ಬರೆಸಬಹುದು ಅಥವಾ ಬಸವ ಮಹಾಮನೆ ಚಾರಿಟಬಲ್‌ಟ್ರಸ್ಟ್. ಎಂದಾದರೂ ಬರೆಸಬಹುದು.

ಪ್ರತಿ ವರ್ಷವೂ 1000 (ಒಂದು ಸಾವಿರ)ರೂ ಕೊಡುವ 770 ಜನ ಶರಣರ ಪಟ್ಟಿಯನ್ನು ಉತ್ಸವ ಸಮಿತಿಯವರು ಸಿದ್ಧಪಡಿಸುತ್ತಿದ್ದಾರೆ. ಸ್ವಯಂ ಪ್ರೇರಣೆಯಿಂದ ಯಾರು ಬೇಕಾದರೂ ತಮ್ಮ ಹೆಸರನ್ನು ಬರೆಸಬಹುದು.

ಪೂಜ್ಯ ಶ್ರೀ ಬಸವ ಲಿಂಗ ಸ್ವಾಮಿಗಳು
ಲಿಂಗಾಯತ ಗಣಮೇಳಾವ ಉತ್ಸವ ಸಮಿತಿ
ಅಲ್ಲಮ ಪ್ರಭು ಗಿರಿ
ಆಳತೆ ಗ್ರಾಮ, ತಾ -ಹಾತ್‌ಕಣಂಗಲೆ
ಜಿ-ಕೊಲ್ಹಾಪುರ, ಮಹಾರಾಷ್ಟ್ರ ರಾಜ್ಯ
ದೂರವಾಣಿ : (0)9420585881

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಬಸವ ಮಂಟಪ
2035, 20ನೆಯ ಮುಖ್ಯ ರಸ್ತೆ
ಕಾರ್ಡ್ ರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ಕರ್ನಾಟಕ ರಾಜ್ಯ, ಭಾರತ
ದೂರವಾಣಿ : 080-23131476/23322790

ಸಂಪಾದಕೀಯ:

ನಿರಾಶಾದಾಯಕ ಜನಗಣತಿ

2011ರ ಜನಗಣತಿ ಬಹಳ ನಿರಾಶಾದಾಯಕ ಪ್ರಕ್ರಿಯೆ. ಹತ್ತು ವರ್ಷಗಳಿಗೊಮ್ಮೆ ನಡೆಯುವ ಈ ರಾಷ್ಟ್ರೀಯ ವಿದ್ಯಮಾನ ಬಹಳ ಖಚಿತವಾದ ಮಾಹಿತಿಯನ್ನು ಸಂಗ್ರಹಿಸಬೇಕು. ಆದರೆ ಗೊಂದಲದ ಗೂಡಾದ ಭಾರತ ದೇಶದಲ್ಲಿ ಇದು ಸಾಧ್ಯವೇ?

ಜನಗಣತಿಯ ಫಾರ್ಮಿನಲ್ಲಿ 6 ಧರ್ಮಗಳ ಹೆಸರನ್ನು ಕಾಣಿಸಲಾಗಿದೆ. ಅವುಗಳಿಗೆ ಸಂಖ್ಯೆ ಕೊಡಲಾಗಿದೆ. ಹಿಂದು -1, ಮುಸ್ಲಿಂ-2, ಕ್ರೈಸ್ತ-3, ಸಿಖ್-4, ಬೌದ್ಧ-5, ಜೈನ-6. ಈ ಧರ್ಮಗಳ ಅನುಯಾಯಿಗಳ ಗಣತಿ ಮಾಡುವಾಗ ಜನಗಣತಿ ಫಾರ್ಮಿನ 7ನೆಯ ಕಾಲಂ ಧರ್ಮ (Religion) ಎಂಬಲ್ಲಿ ಸಂಕೇತ ಸಂಖ್ಯೆ ಹಾಕಿದರೆ ಸಾಕು. ಈ ಬಾರಿ ಜನಗಣತಿ ಫಾರ್ಮಿನಲ್ಲಿ ಒಂದು ವಿಶೇಷ ಸೂಚನೆ ಇದೆ. ಅದೆಂದರೆ ಇನ್ನಿತರ ಧರ್ಮದವರು ತಮ್ಮ ಧರ್ಮದ ಹೆಸರನ್ನು ಪೂರ್ಣವಾಗಿ ಬರೆಸಬೇಕು. ಯಾವುದೇ ಸಂಖ್ಯೆ ಬರೆಯಬಾರದು. ಈ ಸೂಚನೆಯು ಲಿಂಗಾಯತ ಧರ್ಮೀಯರಿಗೆ ತಮ್ಮ ಧರ್ಮದ ಹೆಸರನ್ನು ಬರೆಸಲು ಅವಕಾಶ ನೀಡುತ್ತದೆ.

ಗಣತಿದಾರರಿಗೆ ಸೂಚನೆ ಕೊಡುವ ಒಂದು ಕೈಪಿಡಿಯನ್ನು ಸಹ ಆಯಾಯ ಪ್ರಾದೇಶಿಕ ಭಾಷೆಯಲ್ಲಿ ಪ್ರಕಟಿಸಿ ಕೊಡಲಾಗಿದೆ. ಅದರಲ್ಲಿ ಸ್ಪಷ್ಟವಾಗಿದೆ. "ಮಾಹಿತಿದಾರರು ಹೇಳುವುದನ್ನು ದಾಖಲಿಸಿಕೊಂಡು ಬರಬೇಕು. ಯಾವುದೇ ವಾದ-ವಿವಾದದಲ್ಲಿ ಗಣತಿದಾರರು ತೊಡಗಬಾರದು." ಇಷ್ಟೆಲ್ಲ ಸೂಚನೆ ಇದ್ದೂ ಸಹ ಜನಗಣತಿ ಸರಿಯಾಗಿ ನಡೆಯುವುದಿಲ್ಲ. ಇದಕ್ಕೆ ಕಾರಣ ಮೇಲ್ಮಟ್ಟದ ಅಧಿಕಾರಿಗಳಿಂದ ಹಿಡಿದು ಗಣತಿ ಮಾಡುವವರವರೆಗೆ ಇರುವ ಅಜ್ಞಾನ ಮತ್ತು ಮಾಹಿತಿ ಕೊರತೆ. ಬೀದರಿನಲ್ಲಿ ರ್‍ಯಾಲಿಯು ಯಶಸ್ವಿಯಾಗಿ ನಡೆಯಿತು. ಮನವಿ ಸಲ್ಲಿಸಲು ಜಿಲ್ಲಾಧಿಕಾರಿ ಬಳಿಗೆ ಹೋದಾಗ ಅವರ ಅನುಪಸ್ಥಿತಿಯಲ್ಲಿ ಮತ್ತೊಬ್ಬ ಅಧಿಕಾರಿ ಮನವಿ ಪಡೆದರು, "ಗಣತಿದಾರರಿಗೆ ತರಬೇತಿ ಕೊಡುವಾಗ ಲಿಂಗಾಯತರು ತಮ್ಮ ಧರ್ಮದ ಹೆಸರು ಹೇಳಿದಾಗ ಅದೇ ರೀತಿ ಬರೆದುಕೊಳ್ಳಲು ಸೂಚನೆ ನೀಡಿರಿ." ಎಂದು ಮನವಿ ಮಾಡಿದಾಗ. ಆ ರೀತಿ ಮಾಡಲು ಕಾನೂನಿನಲ್ಲಿ ಅವಕಾಶವಿರ ಬೇಕಲ್ಲ? ಎಂದು ತಮ್ಮ ಅಜ್ಞಾನ ಪ್ರದರ್ಶಿಸಿದರು. ಅವರು ತರಬೇತಿ ಅಧಿಕಾರಿಗಳಂತೆ. ಅದೇ ರೀತಿ ಎಷ್ಟೋ ಕಡೆ ತಹಸೀಲ್ದಾರರು ಲಿಂಗಾಯತರು ತಮ್ಮ ಧರ್ಮದ ಹೆಸರು ಹೇಳಿದಾಗ, ಅದನ್ನು ದಾಖಲಿಸಲು ಅವಕಾಶವಿಲ್ಲ ಎಂದು ಕೇವಲ ಹಿಂದು ಎಂದು ದಾಖಲಿಸಿದರಂತೆ.

ಹೆಚ್ಚು ವಿದ್ಯಾವಂತರಾದ ಡಿ.ಸಿ, ಎ.ಸಿ, ತಹಸೀಲ್ದಾರ ಮುಂತಾದವರಿಗೇ ಕೇಂದ್ರ ಸರ್ಕಾರ ಮುದ್ರಿಸಿದ ಕೈಪಿಡಿ, ಜನಗಣತಿ ಫಾರ್ಮನ್ನು ಓದುವ ಪ್ರಾವೀಣ್ಯತೆ, ಸಹನೆ, ಆಸಕ್ತಿ ಇಲ್ಲವೆಂದಾಗ ಇನ್ನು ಜನಗಣತಿಗೆ ಓಡಾಡುವ ಪ್ರಾಥಮಿಕ ಶಾಲಾ ಶಿಕ್ಷಕರ ಸಾಮರ್ಥ್ಯದ ಬಗ್ಗೆ ಏನು ಹೇಳುವುದು? ಆರು ಧರ್ಮಗಳ ಹೆಸರು ಮಾತ್ರ ಉಲ್ಲೇಖಗೊಂಡಿದೆ. ಅವುಗಳ ಚೌಕಟ್ಟಿನಲ್ಲಿ ಮಾತ್ರ ಧರ್ಮಗಳ ಹೆಸರು ಬರಬೇಕು ಎಂದು ಹೇಳುವರು. ಆದ್ದರಿಂದ ಲಿಂಗಾಯತರು ಎಂದು ಬರೆಯದೆ ಹಿಂದು ಎಂದು ಬರೆದುಕೊಳ್ಳುವವರು ಕೆಲವರಾದರೆ. ಪ್ರಾಜ್ಞ ಜನರು ಲಿಂಗಾಯತ ಎಂದೇ ಬರೆಸಲು ಪಟ್ಟು ಹಿಡಿದಾಗ, ಇಲ್ಲಿ ಲಿಂಗಾಯತ ಎಂದು ಪೆನ್ಸಿಲದಲ್ಲಿ ಬರೆದುಕೊಂಡು ಹೋಗಿ ಅದರ ಹಿಂದೆ ಹಿಂದು

ಎಂದು ಸೇರಿಸಿದವರು ಬಹಳ ಜನ. ಹೀಗೆ ಮಾಡುವಲ್ಲಿ ಗಣತಿದಾರರ ಅಜ್ಞಾನ ಒಂದು ಕಡೆಯಾದರೆ, ಕೆಲವರ ಧೂರ್ತತನವು ಅದರಲ್ಲಿ ಸೇರಿದೆ. ಲಿಂಗಾಯತರು ಹಿಂದು ಸಮಾಜವನ್ನು ಬಿಟ್ಟು ಹೋಗಬಾರದು. ಎನ್ನುವ ಆಶಯ ಇರುವ ಕೆಲವು (ಹಿಂದುವಾದಿ) ಗಣತಿದಾರರು ಮೌನವಾಗಿ, ಸದ್ದಿಲ್ಲದೆ ಹಿಂದು, ಹಿಂದು ಲಿಂಗಾಯತ ಎಂದು ಬರೆಯುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗಾಗಿ ನಿಖರವಾಗಿ ಸಂಖ್ಯೆ ಲಭ್ಯವಾಗುವುದು ಸಾಧ್ಯವೇ ಇಲ್ಲ. ಹಿಂದಿನ ಸಲಕ್ಕಿಂತ ಈ ಸಲ ಲಿಂಗಾಯತರು ಹೆಚ್ಚು ಜಾಗೃತರಾಗಿದ್ದರು. ಹಳ್ಳಿಗಳ ಜನರು, "ನಮಗೆ ವೀರಶೈವ ಬರೆಸಿರಿ ಎಂದು ಕೆಲವರು ಹೇಳಿ ಗೊಂದಲ ಉಂಟು ಮಾಡುತ್ತಿದ್ದಾರೆ" ಎಂದು ಗೊಣಗುತ್ತಿದ್ದರು. ಅಜ್ಞಾನಿ ತರಬೇತಿ ಅಧಿಕಾರಿಗಳು ಮತ್ತು ಗಣತಿದಾರರಿಂದ ಅತ್ಯಂತ ಅಮೂಲ್ಯವಾದ ಒಂದು ಕಾರ್ಯಕ್ರಮ ನಿಖರತೆಯನ್ನು ಕಳೆದುಕೊಂಡಿದೆ ಎಂದು ಹೇಳುವುದು ಅನಿವಾರ್ಯವಾಗಿದೆ.

ಹೆಚ್ಚಿದ ಬೆಂಬಲ

ಈ ಸಲದ ಜನಗಣತಿ ವೇಳೆಯಲ್ಲಿ ಲಿಂಗಾಯತ ಪದದ ಬಗೆ ಹೆಚ್ಚಿನ ಪ್ರಚಾರ ಲಭ್ಯವಾಗಿ, ವ್ಯಾಪಕವಾಗಿ ಜಾಗೃತಿ ಉಂಟಾಯಿತು. ಬಸವ ಧರ್ಮ ಪೀಠ, ಲಿಂಗಾಯತ ಧರ್ಮ ಮಹಾಸಭಾ, ರಾಷ್ಟ್ರೀಯ ಬಸವ ದಳಗಳವರು ಸುಮಾರು ಆರು ತಿಂಗಳಿಂದ ವ್ಯಾಪಕವಾಗಿ ಪ್ರಚಾರದಲ್ಲಿ ತೊಡಗಿದರು. ಮಾತ್ರವಲ್ಲ ಶರಣ ಮೇಳದಲ್ಲಿ ವಿತರಿಸಲಾದ ಕರಪತ್ರಗಳನ್ನು ತಮ್ಮ ತಮ್ಮ ಊರುಗಳಲ್ಲಿ ಹಂಚಿದ್ದು ಮಾತ್ರವಲ್ಲ ತಾವೂ ಸಹ ಮುದ್ರಿಸಿ, ಹಂಚಿದ್ದಾರೆ.

ಗದಗಿನ ಪೂಜ್ಯ ಶ್ರೀ ತೋಂಟದಾರ್ಯ ಜಗದ್ಗುರುಗಳು, ಬೆಳಗಾವಿ ರುದ್ರಾಕ್ಷಿ ಮಠದ ಪೂಜ್ಯ ಶ್ರೀ ಸಿದ್ಧರಾಮ ಸ್ವಾಮಿಗಳು, ನಿಡುಸೋಸಿಯ ಪಂಚಮಲಿಂಗೇಶ್ವರ ಸಂಸ್ಥಾನ ಮಠದ ಜಗದ್ಗುರುಗಳು, ಲಿಂಗಾಯತ ಪಂಚಮಸಾಲಿ ಪೀಠದ ಪೂಜ್ಯ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮಿಗಳು, ಬೆಳಗಾವಿಯ ಪೂಜ್ಯ ಶ್ರೀ ಜಗದ್ಗುರು ಬಸವ ಪ್ರಭು ಸ್ವಾಮಿಗಳು ಧುತ್ತರಗಾಂವ ಪೂಜ್ಯ ಶ್ರೀ ಕೋರಣೇಶ್ವರ ಸ್ವಾಮಿಗಳು, ಭಾಲ್ಕಿಯ ಹಿರೇಮಠದ ಪೂಜ್ಯ ಶ್ರೀ ಬಸವ ಲಿಂಗ ಪಟ್ಟದೇವರು ಮುಂತಾಗಿ ಸ್ಪಷ್ಟ ಮತ್ತು ಗಟ್ಟಿ ಧ್ವನಿಯಲ್ಲಿ "ನಮ್ಮ ಧರ್ಮ ಲಿಂಗಾಯತ. ಇದು ಹಿಂದುದೊಳಗಣ ಒಂದು ಜಾತಿಯಲ್ಲ. ಆದ್ದರಿಂದ ಜನಗಣತಿಯಲ್ಲಿ ಲಿಂಗಾಯತ ಎಂದು ಬರೆಸಿರಿ." ಎಂದು ಹೇಳಿದ್ದಾರೆ, ಕರಪತ್ರ ಮುದ್ರಿಸಿ ಹಂಚಿಸಿದ್ದಾರೆ.

ವೀರಶೈವ ಮಹಾಸಭೆಯ ಅಪಸ್ವರ

ಎಷ್ಟೇ ಮನವರಿಕೆ ಮಾಡಿಕೊಡಲಿ ವೀರಶೈವ ಮಹಾಸಭೆಯವರು 'ವೀರಶೈವ' ಎಂಬ ಅಪಸ್ವರವನ್ನು ಹಾಡದೆ ಬಿಡುವವರಲ್ಲ. 'ಹಿಂದು' ಎಂದು ಬರೆಸಬೇಡಿರಿ ಎಂಬ ಒಂದು ವಾಕ್ಯವನ್ನು ಸೇರಿಸಿದ್ದಾರಾದರೂ ವೀರಶೈವ ಒಂದು ಶೈವ ಪಂಥವಾದ ಕಾರಣ. ಅದು ಅಹಿಂದುವಾಗಲು ಸಾಧ್ಯವಿಲ್ಲ. ಹಿಂದೆ ಸ್ವಾಮಿ ನಾರಾಯಣ ಪಂಥದವರು, ಕಲ್ಕತ್ತಾದ ರಾಮಕೃಷ್ಣ ಮಿಷನ್‌ದವರು ತಾವು ಹಿಂದುಗಳಲ್ಲ ಎಂದು ನ್ಯಾಯಾಲಯಕ್ಕೆ ಹೋಗಿದ್ದರು. ಆದರೆ ಆಚರಣೆಗಳೆಲ್ಲವೂ ವೈದಿಕ ಸಂಪ್ರದಾಯದವಾದ ಕಾರಣ ಕೋರ್ಟ್ ಅವು ಅಹಿಂದು ಎಂದು ಒಪ್ಪಲಿಲ್ಲ. ಸರ್ದಾರ ವಲ್ಲಭಭಾಯ್ ಪಟೇಲರು ಹಿಂದು ವ್ಯಾಖ್ಯೆಯನ್ನು ಹೀಗೆ ಕೊಡುವರು, "ಯಾರು ವೇದೋಪನಿಷತ್, ಭಗವದ್ಗೀತೆ ಮುಂತಾದವನ್ನು

ಪ್ರಮಾಣ ಗ್ರಂಥಗಳೆಂದು ಒಪ್ಪುವರೋ ಹಿಂದು ದೇವತೆಗಳನ್ನು ಪೂಜಿಸುವರೋ, ಯಜ್ಞಯಾಗಾದಿಗಳಲ್ಲಿ ನಂಬಿಕೆ ಉಳ್ಳವರೋ ಅವರು ಹಿಂದುಗಳು.

ಈ ಮೂರನ್ನೂ ಲಿಂಗಾಯತರು ಆಚರಿಸರು. ವೇದೋಪನಿಷತ್ತು ಮುಂತಾದವು ಲಿಂಗಾಯತರಿಗೆ ಪ್ರಮಾಣಗ್ರಂಥಗಳಲ್ಲ; ಹಿಂದು ದೇವತೆಗಳನ್ನು ಪೂಜಿಸುವುದಿಲ್ಲ. ಯಜ್ಞ-ಯಾಗಾದಿಗಳನ್ನು ಮಾಡುವುದಿಲ್ಲ. ವೀರಶೈವದ ಪ್ರಕಾರ ಅವರು ಶಿವೋಪಾಸಕರು, ಬಹುದೇವತಾ ಉಪಾಸಕರು; ಆಗಮಗಳ ಪ್ರಾಮಾಣ್ಯ ನಂಬುವವರು ಮೇಲಾಗಿ ವೈದಿಕ ಸಮಾಜ ಶಾಸ್ತ್ರ ಮತ್ತು ಆಚಾರ-ವಿಚಾರಗಳನ್ನು ರೂಢಿಸಿಕೊಂಡ ವೀರಶೈವರೆಂಬ ಸಮುದಾಯದವರು ಆಂಧ್ರ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಇದ್ದಾರೆ.

(ಶರಣ ಮೇಳಕ್ಕೆ ಮೊದಲು ಬೆಂಗಳೂರಿನಲ್ಲಿ ಒಂದು ಪತ್ರಿಕಾಗೋಷ್ಠಿಯನ್ನು ಕರೆದಿದ್ದೆ. ಪತ್ರಿಕಾ ಪ್ರತಿನಿಧಿಗಳಲ್ಲಿ ಒಬ್ಬರು 'ದಿನಮಣಿ' ಎಂಬ ತಮಿಳು ಪತ್ರಿಕೆಯವರಿದ್ದರು. ಗೋಷ್ಠಿಯಲ್ಲಿ ನಾನು ಲಿಂಗಾಯತ ಮತ್ತು ವೀರಶೈವದ ವ್ಯತ್ಯಾಸ ಕುರಿತು ಮಾತನಾಡಿದೆ. ಗೋಷ್ಠಿ ಮುಗಿದ ಮೇಲೆ ದಿನಮಣಿಯ ವರದಿಗಾರ ಹೇಳಿದರು. ಇವತ್ತು ನೀವು ಹೇಳಿದ ವಿಷಯ ನನ್ನ ಸಂದೇಹ ನಿವಾರಿಸಿತು. ತಮಿಳುನಾಡಿನಲ್ಲಿ ವೀರಶೈವ ಸಮುದಾಯಗಳಿವೆ. ಕರ್ನಾಟಕದ ಲಿಂಗಾಯತರ ಆಚಾರ-ವಿಚಾರಗಳು ಬೇರೆಯೇ ಇವೆ. ಇವರು ಏಕೆ ವೀರಶೈವರು ಎಂದುಕೊಳ್ಳುತ್ತಾರೆ ಎಂದು ನನಗೆ ಆಶ್ಚರ್ಯವಾಗಿತ್ತು. ಈಗ ಸಂದೇಹ ಬಗೆ ಹರಿಯಿತು.)

ಹುಬ್ಬಳ್ಳಿಯಲ್ಲಿ ದಿ.6-2-2011ರಂದು ಲಿಂಗಾಯತ ಧರ್ಮ ಜಾಗೃತಿ ಸಭೆ ಇತ್ತು. ಅದರಲ್ಲಿ ವೀರಶೈವ ಮಹಾಸಭೆಯ ಧಾರವಾಡ ಘಟಕದ ಅಧ್ಯಕ್ಷರಾದ ಶಿವಣ್ಣ ಬೆಲ್ಲದ ಇದ್ದರು. ಅಂದು ಅನೇಕ ಜನ ಮಾತನಾಡಿದರು. ಎಲ್ಲರೂ ಲಿಂಗಾಯತ ಪದದ ಬಗ್ಗೆಯೇ ಒತ್ತಿ ಒತ್ತಿ ಹೇಳಿದರು. ಶಿವಣ್ಣ ಬೆಲ್ಲದ ಅವರು ಸಹ ಎಲ್ಲರಿಗೂ 'ಲಿಂಗಾಯತ' ಎಂದೇ ಜನಗಣತಿಯಲ್ಲಿ ಬರೆಸಬೇಕೆಂದು ಕರೆ ನೀಡಿದರು. ನಂತರ ಅವರು ಒಂದು ಸ್ಟಿಕರ್ ತಂದಿದ್ದರು. ಅದರಲ್ಲಿ ಜನಗಣತಿಯಲ್ಲಿ ಲಿಂಗಾಯತ ಅಥವಾ ವೀರಶೈವ ಬರೆಸಿರಿ ಎಂದು ಮುದ್ರಿತವಾಗಿದ್ದುದು ಕಂಡು ವೇದಿಕೆ ಮೇಲಿದ್ದ ಎಲ್ಲರಿಗೂ ಸಿಟ್ಟು ಬಂದು ಆ ಸ್ಟಿಕ್ಕರನ್ನು ಇಸಿದುಕೊಂಡು ಪಕ್ಕಕ್ಕಿಟ್ಟು, ಇವರೆಂಥಾ ಜನ! ಮೈಕಿನಲ್ಲಿ ಲಿಂಗಾಯತ ಎಂದು ಬರೆಸಿರಿ ಎಂದು ಕರೆ ನೀಡಿ ಮತ್ತೆ ಸ್ಟಿಕ್ಕರ್ ಹಂಚುತ್ತಿದ್ದಾರೆ ಎಂದು ಬೇಸರ ಪಟ್ಟುಕೊಂಡರು. ಅಷ್ಟರಲ್ಲಿ ಸಭೆಯಲ್ಲಿ ಒಂದಿಬ್ಬರು ವೀರಶೈವ ಮಹಾಸಭೆ ಪ್ರಕಟಿಸಿದ್ದ ಕರಪತ್ರ ಹಂಚುತ್ತಿದ್ದರು. ಅದನ್ನು ನೋಡಿ ಸಭಿಕರು ಸಿಟ್ಟಿಗೆದ್ದಾಗ ಕರಪತ್ರ ಹಂಚುತ್ತಿದ್ದ ಆ ಹುಡುಗರು ಓಡಿ ಹೋಗಿದ್ದರು. ಧಾರವಾಡದ ನಾಲ್ಕಾರು ಜನರು ಸಿಟ್ಟಿಗೆದ್ದು ರಾತ್ರಿ ಹತ್ತೂವರೆ ಗಂಟೆಗೆ ಶಿವಣ್ಣ ಬೆಲ್ಲದ ಅವರ ಮನೆಗೆ ಹೋಗಿ ತರಾಟೆಗೆ ತೆಗೆದುಕೊಂಡರು. "ನಾನು ವೈಯಕ್ತಿಕವಾಗಿ ಲಿಂಗಾಯತ" ಎಂದೇ ಬರೆಸುತ್ತೇನೆ ಎಂದು ಸ್ಪಷ್ಟನೆ ನೀಡಿದರು. ಹಾಗಾದರೆ ಕರಪತ್ರ ಏಕೆ ಹಂಚುತ್ತಿದ್ದೀರಿ? ಎಂದಾಗ ಅದು ವೀರಶೈವ ಮಹಾಸಭೆಯ ನಿಲುವು ಎನ್ನಬೇಕೇ? ಈ ದ್ವಂದ್ವ ನಿಲುವು ಆತ್ಮವಂಚನೆಯಲ್ಲವೆ? ನೀವು ವೈಯಕ್ತಿಕವಾಗಿ ಲಿಂಗಾಯತ ಬರೆಸಿ ಇನ್ನಿತರರಿಗೆ ಖಚಿತವಾಗಿ ಹೇಳದೆ, ಅಥವಾ ವೀರಶೈವ ಬರೆಸಿರಿ ಎಂದು ಪ್ರಚಾರ ಮಾಡಿ ದಿಕ್ಕು ತಪ್ಪಿಸುವುದು ತಪ್ಪಲ್ಲವೆ? ಎಂದಾಗ ಅವರು ಕೆರಳಿ ನಿಮ್ಮನ್ನು ಮನೆಯಿಂದ ಹೊರಗೆ ಹಾಕಿಸಿದರೆ ಹೇಗೆ? ಎಂದರಂತೆ. ಅವರ ಒರಟುತನ ಆತ್ಮವಂಚನೆಗೆ ಬೇಸರ ಪಟ್ಟು ಶರಣರು ವಾಪಸ್ಸು ಬಂದರಂತೆ.

ನಾನಂತೂ ಪ್ರಾಸ್ತಾವಿಕ ಭಾಷಣದಲ್ಲಿ ನೇರವಾಗಿಯೇ ಹೇಳಿದ್ದೆ.

ಅದೇ ರೀತಿ ಬೆಳಗಾವಿಯಲ್ಲಿ ದಿ.8-2-2011ರಂದು ಸಭೆ ನಡೆದಾಗ ವೀರಶೈವ ಮಹಾಸಭೆಯ ಬೆಳಗಾಂ ಘಟಕದ ಅಧ್ಯಕ್ಷರಾದ ಶ್ರೀ.ಬಿ.ವಿ.ಕಟ್ಟಿಯವರು ವೇದಿಕೆಯ ಮೇಲಿದ್ದರು. ಅವರನ್ನು ಉದ್ದೇಶಿಸಿ ವೀರಶೈವ ಪದದ ಆಗಂತುಕತೆ, ಅಸಂಬದ್ಧತೆ ಕುರಿತು ವಿಸ್ತಾರವಾಗಿ ಹೇಳಿದ್ದಾಯಿತು. ಅವರು ಭಾಷಣದಲ್ಲಿ, ನಾನಂತೂ ಲಿಂಗಾಯತ ಎಂದೇ ಬರೆಸುತ್ತೇನೆ, ಇತರೆ ಸದಸ್ಯರು ನಾನು ಲಿಂಗಾಯತ ಕುರಿತು ಬಹಳ ಹಚ್ಚಿಕೊಂಡಿದ್ದೇನೆ ಎಂದು ಟೀಕಿಸುತ್ತಾರೆ. ಎಂದರು, ನಾನು ಈ ಬಗ್ಗೆ ವಿಮರ್ಶಿಸಿ, ಇದು ಮನವರಿಕೆಯಾದ ಮೇಲೆ ವೀರಶೈವ ಮಹಾಸಭಾಕ್ಕೆ ರಾಜೀನಾಮೆ ಕೊಟ್ಟು ಒಂದು ನಿಲುವಿಗೆ ಬರಬೇಕು ಎಂದು ಹೇಳಿದೆ.

ಜನಗಣತಿ ಆರಂಭವಾಗುವ ಮೊದಲಿಗೆ ಹಲವಾರು ಸಂಘ-ಸಂಸ್ಥೆಗಳವರು ಇದು ಧರ್ಮವಾರು ಜನಗಣತಿ ಎಂಬುದನ್ನೂ ಮರೆತು ತಮ್ಮ ತಮ್ಮ ಉಪಜಾತಿಗಳನ್ನು ಬರೆಸುವಂತೆ ಹೇಳಿಕೆ ಕೊಡುತ್ತಿದ್ದರು. ಪಂಚಾಚಾರ್ಯ ಗುಂಪಿನವರು ವೀರಶೈವಕ್ಕೆ ಒತ್ತುಕೊಟ್ಟರೆ ಕೆಲವರು ವೀರಶೈವ ಸಾದರು ಎಂದು ಬರೆಸಿರಿ ಎಂದರೆ, ಒಂದು ಗುಂಪಿನವರು ಜಂಗಮರಿಗೆ ಬೇಡ ಜಂಗಮ ಎಂದು ಪರಿಶಿಷ್ಟ ಜಾತಿಯಲ್ಲಿ ಬರೆಸಿರಿ ಎಂದು ಕರೆ ಕೊಟ್ಟರು. ಇಂಥ ಅಸಂಬದ್ಧತೆ, ಅನೈಕ್ಯತೆಯಿಂದಾಗಿಯೇ ಲಿಂಗಾಯತ ಸಮಾಜ ಯಾವುದೇ ಒಂದು ಗುರಿಯನ್ನು ತಲ್ಪಲು ಸಾಧ್ಯವಾಗುತ್ತಿಲ್ಲ. ಇನ್ನು ಕೆಲವು ಸ್ವಾಮಿಗಳಂತೂ ಅಂದರಕು ಮಂಚುವಾಡು ಅನಂತಯ್ಯ ಎಂಬ ತೆಲಗು ಮಾತಿನಂತೆ ಒಟ್ಟು ತುಟಿ ಪಿಟುಕ್ಕೆನ್ನಲಿಲ್ಲ. ಒಟ್ಟಾರೆ ಹೇಳಬೇಕೆಂದರೆ ಜನಗಣತಿಯ ಪ್ರಕ್ರಿಯೆ ಅಜ್ಞಾನಿ ಅಧಿಕಾರಿಗಳು ಮತ್ತು ಗಣತಿದಾರರು, ಅಸಂಬದ್ಧ ಹೇಳಿಕೆ ನೀಡುವ ಸಮಾಜ ನೇತಾರರು, ತಿಳುವಳಿಕೆಯಿಲ್ಲದ, ತಿಳುವಳಿಕೆ ಇದ್ದರೂ ಗಣತಿದಾರರ ಧಾರ್ಷ್ಟ್ಯದಿಂದ ಸರಿಯಾಗಿ ಮಾಹಿತಿ ಕೊಡಲಾರದ ಜನರು ಈ ಮೂವರಿಂದಾಗಿ ಜನಗಣತಿ ಅತ್ಯಂತ ಅಸಮರ್ಪಕ ಎಂದೇ ಹೇಳಬೇಕು.

2. ಶ್ರೀ ಯಡೆಯೂರಪ್ಪನವರು ಮತ್ತು ವೈದಿಕ ಪುರೋಹಿತಶಾಹಿ

ಸುತ್ತೂರು ಮಠದ ಜಾತ್ರೆಯಲ್ಲಿ ಮುಖ್ಯಮಂತ್ರಿ ಯಡೆಯೂರಪ್ಪನವರು ಭಾಗವಹಿಸಿ ಕೆಲವು ಮಾತಿನ ಆಣಿಮುತ್ತುಗಳನ್ನು ಉದುರಿಸಿ ಇಡೀ ದೇಶದ ಗಮನ ಸೆಳೆದರು. ಯಾವ ವೇದಿಕೆಗೆ ಹೋದರೂ ರಾಜಕೀಯ, ಅಧಿಕಾರ, ಗದ್ದುಗೆಯ ಚಿಂತೆ- ಇವುಗಳ ಬಗ್ಗೆಯೇ ಉಪನ್ಯಾಸ ಅವರದು. ವಿರೋಧಿಗಳು ಅವರಿಗೆ ಮಾಟ ಮಂತ್ರ ಮಾಡಿಸುತ್ತಿರುವುದಾಗಿಯೂ, ಈ ಬಗ್ಗೆ ಜೀವ ಭಯ ಉಂಟಾಗಿದೆ ಎಂಬುದಾಗಿಯೂ ಹೇಳಿದ ಅವರು ವಿಧಾನ ಸೌಧದಿಂದ ಮನೆಗೆ ಸುರಕ್ಷಿತವಾಗಿ ಬರುವ ಭರವಸೆ ಇಲ್ಲ ಎಂದು ಗೋಳು ತೋಡಿಕೊಂಡರು. ಈ ದಯನೀಯ ಹೇಳಿಕೆಯ ಉದ್ದೇಶ ಜನರ ಅನುಕಂಪಗಳಿಸಿಕೊಳ್ಳಲು ಇರಬಹುದು. ಆದರೆ ಈ ಹೇಳಿಕೆ ಅನುಕಂಪಗಳಿಸಿಕೊಂಡಿತೋ ಇಲ್ಲವೋ ಯಡೆಯೂರಪ್ಪನವರು ಮಾತ್ರ ಅಪಹಾಸ್ಯಕ್ಕೆ ಒಳಗಾದರು. ಅವರ ಈ ಮಾತುಗಳು ಲಿಂಗಾಯತ ಧರ್ಮ, ಸಮಾಜ, ಬಸವ ತತ್ತ್ವ, ಗುರು ತತ್ತ್ವ ಮುಂತಾದ ಅನೇಕ ಸಂಗತಿಗಳಿಗೆ ಅಪಮಾನ ಮಾಡಿದೆ.

ಒಂದನೆಯದಾಗಿ ಮಾಟ-ಮಂತ್ರ-ತಂತ್ರ ಇವೆಲ್ಲ ಸುಳ್ಳು, ಕೇವಲ ಭ್ರಾಂತಿ! ಆಗದೆ ಇರುವ ವಿರೋಧಿಗಳು ಮಾಟ ಮಂತ್ರ ಮಾಡಿಸುವ ಪರಿಪಾಠವಿದೆಯಲ್ಲಾ ಎಂದು ಕೆಲವರು ಪ್ರಶ್ನಿಸಬಹುದು.

ಅಹುದು ಅಂಥದೇ ಮೂಢ ನಂಬಿಕೆ ಇರುವವರು ಮಾಡಿಸಬಹುದು. ಆದರದು ಮಾಡಿಸಿಕೊಂಡ ವರಲ್ಲಿ ಭಯ ಅದರ ಫಲವಾಗಿ ಭ್ರಾಂತಿ ಹುಟ್ಟುವಂತೆ ಮಾಡುತ್ತಾರೆ. ಆತ್ಮವಿಶ್ವಾಸವಿದ್ದವರಿಗೆ ಇಂಥ ಭಯ-ಭ್ರಾಂತಿ ಹುಟ್ಟಿ ತೊಂದರೆ ಕೊಡುವುದಿಲ್ಲ. ಒಂದು ಮನೆಯಲ್ಲಿ 10 ಜನ ಇರುತ್ತಾರೆ. ಯಾರೋ ಒಬ್ಬರಿಗೆ ಕ್ಷಯ ಬರುತ್ತದೆ. ಉಳಿದವರು ಜೊತೆಗೇ ಇದ್ದರೂ ಬರುವುದಿಲ್ಲವೇಕೆ? ಅವರಲ್ಲಿ ರೋಗ ನಿರೋಧಕ ಶಕ್ತಿ ಇರುತ್ತದೆ. ಅದಕ್ಕಾಗಿ ರೋಗಾಣುಗಳು ಪ್ರಭಾವ ಬೀರವು. ರೋಗ ನಿರೋಧಕ ಶಕ್ತಿ ಇಲ್ಲದವರ ಮೇಲೆ ರೋಗಗಳು ದಾಳಿ ಮಾಡುತ್ತವೆ. ಹಾಗೆಯೇ ಮಾಟ-ಮಂತ್ರಗಳು, ಅಂಜುವವರಿಗೆ ಭ್ರಾಂತಿಯಾಗಿ ಕಾಡುತ್ತವೆ. ಮನೆಯಿಂದ ವಿಧಾನ ಸೌಧಕ್ಕೆ ಹೋಗಿ ವಾಪಸ್ಸು ಸುರಕ್ಷಿತವಾಗಿ ಮನೆ ಸೇರುವೆ ಎಂಬ ಭರವಸೆಯೇ ಇಲ್ಲ ಎಂದಿದ್ದಾರೆ ಯಡೆಯೂರಪ್ಪ.. ಪೂರ್ಣ ಭದ್ರತೆ, ಪೋಲೀಸ್ ಬಲ ಇರುವ ಮುಖ್ಯಮಂತ್ರಿಯದೇ ಈ ಪಾಡಾದರೆ ಇನ್ನು ಜನ ಸಾಮಾನ್ಯರ ಪಾಡೇನು? ಎಡಬಲದಲ್ಲಿ ಇಬ್ಬರು ದೊಡ್ಡ ಸ್ವಾಮಿಗಳನ್ನು (ಒಬ್ಬರು ಸಿದ್ಧಗಂಗಾ ಶ್ರೀಗಳು ಇನ್ನೊಬ್ಬರು ಸುತ್ತೂರು ಶ್ರೀಗಳು) ಇರಿಸಿಕೊಂಡು ಯಡೆಯೂರಪ್ಪ ಮಾಟ-ಮಂತ್ರದ ಮಾತನಾಡಿದ್ದಾರೆ. ಇಂಥ ಗುರುಗಳ ಅನುಗ್ರಹ ಶಕ್ತಿಗಿಂತಲೂ ಆ ಮಾಟಗಾರನ ಮಾಟ-ಮಂತ್ರದ ಶಕ್ತಿಯೇ ದೊಡ್ಡದಾಯಿತೆಂಬ ಭಾವನೆಯನ್ನು ಈ ಹೇಳಿಕೆ ಹುಟ್ಟಿಸುವುದಲ್ಲವೆ? ಎಷ್ಟು ನಾಚಿಕೇಡಿನ ಸಂಗತಿ ಇದು.

ಗುರುಕಳೆಯಿಲ್ಲದೆ ವಾದಿಪೆನೆ ಸಿಂಹ ಶರಣನೊಂದಿಗೆ ?
ಗುರುಕಳೆ ಬಸವನೆಂಬ ಗಜದಲ್ಲಿ ಸೇರಿದ ಕಾರಣ
ಲಿಂಗದೇವಯ್ಯನೆಂಬ ಸಿಂಹದೊಂದಿಗೆ ವಾದದ ಭರವು ಕೇಳಾ.

ಗುರುವಿನ ಕೃಪೆಯಿಂದ ಬಂದ ಆತ್ಮವಿಶ್ವಾಸದಿಂದ ಲಿಂಗದೇವನೊಡ್ಡಿದ ಪರೀಕ್ಷೆಯಲ್ಲಿ ಸಹ ಜಯ ಕಟ್ಟಿಟ್ಟದ್ದು ಎನ್ನುತ್ತಾರೆ ಧರ್ಮಪಿತ ಬಸವಣ್ಣನವರು.

ಗುರುವಿನ ಕರ್ತವ್ಯವೇನು?

ಯಡೆಯೂರಪ್ಪನವರು ಅತ್ಯಂತ ನಿಕಟವಾಗಿ ಸಂಬಂಧ ಇಟ್ಟುಕೊಂಡ ಗುರುಗಳೆಂದರೆ ಸಿದ್ಧಗಂಗಾ ಪೂಜ್ಯರು ಮತ್ತು ಸುತ್ತೂರು ಶ್ರೀಗಳು. ಎಂತಹ ಸಂಬಂಧ? ಗುರು-ಭಕ್ತ ಸಂಬಂಧವೊ? ವ್ಯಾವಹಾರಿಕ ಸಂಬಂಧವೊ? ಗುರು-ಭಕ್ತ ಸಂಬಂಧವಾಗಿದ್ದರೆ ಅವರಿಗೆ ಕೆಲವು ಜವಾಬ್ದಾರಿಗಳಿವೆ. ಏಕೆಂದರೆ ಅವರು ರಾಜಕೀಯ ಗುರುಗಳಾದೆ ರಾಜಗುರುವಾಗ ಬೇಕೆಂದಿದ್ದರೆ ಈ ಜವಾಬ್ದಾರಿಯನ್ನು ಹೊರಲೇ ಬೇಕಾಗುತ್ತದೆ. ಜಾಣ ಮೌನ ಸರ್ವಥಾ ಸರಿಯಲ್ಲ.

1. ಅಧಿಕಾರಕ್ಕೆ ಬರುವ ಮೊದಲು ಶ್ರೀ ಯಡೆಯೂರಪ್ಪನವರ ಹಣೆಯ ಮೇಲೆ ಮೂರು ಎಳೆ ವಿಭೂತಿ ರಾರಾಜಿಸುತ್ತಿತ್ತು. ಅಧಿಕಾರಕ್ಕೆ ಬಂದ ನಂತರ ವಿಭೂತಿ ಮಾಯಾವಾಗಿ ಬಿಜೆಪಿಯ ಕುರುಹಾದ ಕುಂಕುಮ ಮಾತ್ರ ಯಾವಾಗಲೂ ಢಾಳಾಗಿ ಕಾಣುತ್ತದೆ. ಪಕ್ಷ ಶಾಶ್ವತವಲ್ಲ ತನ್ನ ಧರ್ಮ ಶಾಶ್ವತ!

2. ಕೇರಳದ ದೇವಾಲಯವೊಂದಕ್ಕೆ ಹೋದ ಯಡೆಯೂರಪ್ಪ ಷರ್ಟ್ ತೆಗೆದು ಮೇಲು ವಸ್ತ್ರ ಧರಿಸಿದಾಗ ಎದೆಯ ಮೇಲೆ ಮೊದಲು ಕಾಣುತಿರುತ್ತಿದ್ದ ಕರಡಿಗೆ ಮಾಯವಾಗಿದೆ.

ಬಹುಶಃ ಯಾರಾದರೂ ಬ್ರಾಹ್ಮಣ ಪುರೋಹಿತರು ಅಥವಾ ಜ್ಯೋತಿಷಿಗಳು ಹೇಳಿರಬೇಕು, ನೀವು ಇಷ್ಟಲಿಂಗ ಧರಿಸಿದರೆ, ವಿಭೂತಿ ಧರಿಸಿದರೆ ಅಧಿಕಾರ ಕೈ ಬಿಡಬಹುದು. ಕುಂಕುಮ ಧರಿಸಿದರೆ

ಅಧಿಕಾರ ದೃಢವಾಗಿ ಇರುವುದು ಎಂದು. ಬಹುಶಃ ಅದಕ್ಕೇ ಇಷ್ಟಲಿಂಗ, ವಿಭೂತಿ ಧಾರಣೆ ತೊರೆದಿರ ಬಹುದು. ಪ್ರಧಾನಿ ಮನಮಹೋನ್‌ಸಿಂಗ್‌ರವರು ಧರ್ಮಲಾಂಛನಗಳಾದ ಗಡ್ಡ ಮತ್ತು ಪೇಟವನ್ನು ಬಿಟ್ಟಿಲ್ಲ ಎಂಬುದು ಗಮನಾರ್ಹ.

ಇಂಥ ಸಂದರ್ಭದಲ್ಲಿ ಗುರುಗಳಾದವರು ಬುದ್ಧಿವಾದ ಹೇಳಬಾರದೆ? ತಪ್ಪೋ ಒಪ್ಪೋ ಉತ್ತರ ಉತ್ತರ ಕರ್ನಾಟಕದ ಲಿಂಗಾಯತರು ಬಿಜೆಪಿಗೆ ಒಲಿಯುವುದಕ್ಕಿಂತಲೂ, ಲಿಂಗಾಯತ ರೊಬ್ಬರು ಮುಖ್ಯ ಮಂತ್ತಿಯಾಗುತ್ತಾರೆ ಎಂಬ ಅಭಿಮಾನದಿಂದ, ಯಡೆಯೂರಪ್ಪನವರ ಮೇಲಿನ ಪ್ರೀತಿಯಿಂದ ಬಿಜೆಪಿಯನ್ನು ಗದ್ದುಗೆಗೆ ಏರಿಸಿದರು. ಆದರೆ ಅಧಿಕಾರಕ್ಕೆ ಬರುತ್ತಲೇ ತನ್ನ ಧರ್ಮವನ್ನು ತ್ಯಜಿಸಿ ವೈದಿಕ ಧರ್ಮವನ್ನು ಯಡೆಯೂರಪ್ಪನವರು ಸ್ವೀಕರಿಸಿದ್ದಾರೆ. ಜನಿವಾರವನ್ನು ಧರಿಸಿಲ್ಲ ಎಂಬುದನ್ನು ಬಿಟ್ಟರೆ (ವೈದಿಕ ಹಿಂದು ಧರ್ಮದ ಪ್ರಕಾರ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರನ್ನು ಉಳಿದು ಇತರರಿಗೆ ಜನಿವಾರ ಕೊಡಲಾಗುವುದಿಲ್ಲವಷ್ಟೆ.) ಬಾಕಿ ಎಲ್ಲವೂ ಲಿಂಗಾಯತ ವಿರೋಧಿ ಆಚರಣೆಗಳೇ ಆಗಿವೆ. ಯಾಂತ್ರಿಕವಾಗಿ ಲಿಂಗಾಯತರು ಎಂದು ಹೇಳಿಕೊಳ್ಳುತ್ತಿರಬಹುದು.

"ನೀವು ಹೀಗೆ ಮಾಡಬಾರದು. ಲಿಂಗಾಯತರೆಂದು ಜಾತಿ ದೃಷ್ಟಿಯಿಂದ ಹೇಳಿಕೊಳ್ಳುವ ನೀವು ವಿಭೂತಿ ಧಾರಣೆ, ಇಷ್ಟಲಿಂಗ ಧಾರಣೆ ತೊರೆಯಬಾರದು" ಎಂದು ಹೇಳುವ ಅಧಿಕಾರ ಉಭಯ ಶ್ರೀಗಳಿಗೆ ಇಲ್ಲವೊ? ಅಥವಾ ಅವರಿಗೆ ನೈತಿಕ ಧೈರ್ಯವಿಲ್ಲವೊ?

ವಿಧಾನ ಸೌಧದಲ್ಲಿ ಹೋಮ ಮಾಡಿಸಿದರು, ಯಜ್ಞ ಯಾಗಾದಿ ಮಾಡಿಸಿದರು. ಅಧಿ ಕಾರಕ್ಕಾಗಿ ವಿವಿಧ ಪ್ರಾಣಿಗಳನ್ನು ಬಲಿ ಕೊಡಿಸುವ ಸ್ವ(ಲಿಂಗಾಯತ) ಧರ್ಮ ವಿರೋಧಿ ಕಾರ್ಯಗಳನ್ನು ಒಂದಾದ ಮೇಲೆ ಒಂದರಂತೆ ಮಾಡುತ್ತಲೇ ಇರುವ ಯಡೆಯೂರಪ್ಪನವರ ಮುಂದೆ ಯಾಚಕರಾಗಿ ಕೈ ಚಾಚುವ ಸ್ವಾಮಿಗಳ ಸಂಖ್ಯೆ ಬೆಳೆಯುತ್ತಲಿದೆ, ರಾಜಗುರುಗಳಾಗಿ ಬುದ್ಧಿ ಹೇಳುವ ಆತ್ಮಬಲ ಒಬ್ಬರಲ್ಲೂ ಕಾಣುತ್ತಲಿಲ್ಲ.

ಮದಕರಿ ನಾಯಕನು ಹೈದರಾಲಿಯು ಸಂಧಾನಕ್ಕೆ ಕರೆದಾಗ ಹೊರಟು ನಿಂತ, ಬೇಡವೆಂದು ಅಂದಿನ ಮುರುಘಾ ಶ್ರೀಗಳು ಆದೇಶಿಸಿದರು. ನಿಮಗೆ ರಾಜಕಾರಣ ತಿಳಿಯದು ಎಂದುಕೊಂಡು ರಾಜ ಹೊರಟು ನಿಂತಾಗ ಗುರುಗಳು ಆ ಸ್ಥಾನವನ್ನೇ ತ್ಯಜಿಸಿದರು. ಸೊಲ್ಲಾಪುರದ ಶರಣ ಮಲ್ಲಪ್ಪ ವಾರದ ಮಕ್ಕಳು ಬೇಕೆಂದು ಪುತ್ರಕಾಮೇಷ್ಟಿಯಾಗ ಮಾಡಿದಾಗ ವೀರೇಶ ಶರಣರು ಪ್ರತಿಭಟಿಸಿ ಅಗ್ನಿ ಕುಂಡದಲ್ಲಿ ಧುಮುಕಿದರು. ಇಂಥ ಪರಂಪರೆಯಲ್ಲಿ ಬರುವ ಗುರುಗಳು ಶ್ರೀ ಯಡೆಯೂರಪ್ಪ ನವರಿಗೆ ಏಕೆ ಅವರು ಮಾಡುತ್ತಿರುವ ಧಾರ್ಮಿಕ ತಪ್ಪುಗಳನ್ನು ಎತ್ತಿ ತೋರಿಸುತ್ತಿಲ್ಲ?

ಮಾಟ-ಮಂತ್ರದ ಹೇಳಿಕೆಯಂತೂ ಯಡೆಯೂರಪ್ಪನವರ ಮಾನಸಿಕ ದೌರ್ಬಲ್ಯದ ಪರಾಕಾಷ್ಠೆ ತೋರಿಸಿತಲ್ಲದೆ ಉನ್ನತ ಸ್ಥಾನದಲ್ಲಿರುವ ಅವರನ್ನು ಅಪಹಾಸ್ಯ, ವಿಡಂಬನೆಯ ವಸ್ತುವನ್ನಾಗಿ ಮಾಡಿತು. ಧಾರ್ಮಿಕ ಸಭೆಗಳಿಗೆ ಬಂದಾಗ ಧಾರ್ಮಿಕ ವಿಷಯ ಮಾತನಾಡಬೇಕು. ಅಲ್ಲಿಯೂ ಅಧಿ ಕಾರದ ಚಿಂತೆಯ ಬಗ್ಗೆಯ ಮಾತನಾಡುವುದೆ? ಈವರೆಗೆ ಆದ ಮುಖ್ಯ ಮಂತ್ರಿಗಳು ಯಾರೂ (ಶ್ರೀ ದೇವಗೌಡರು ಯಜ್ಞ-ಯಾಗ ಮಾಡಿಸಿದ್ದಲ್ಲದೆ ದೇವಿಗೆ ಕೋಣವನ್ನು ಬಲಿ ಕೊಡಿಸಿದ್ದರು) ಇಷ್ಟು ಮೂಢ ನಂಬಿಕೆಗೆ ಪಕ್ಕಾಗಿರಲಿಲ್ಲ.

ವೈದಿಕ ಧರ್ಮದ ಸಂವಿಧಾನ ಜಾರಿಯಾದರೆ ಸಮಾಜ ಹೇಗಿರಬಹುದು ಎಂಬುದಕ್ಕೆ ಸಾಕಾರ ದೃಷ್ಟಾಂತವಾಗಿ ಯಡೆಯೂರಪ್ಪನವರು ನಿಂತಿದ್ದಾರೆ. ಶಿವಾಜಿ ಮಹಾರಾಜರ ಪಟ್ಟಾಭಿಷೇಕದ

ಸಂದರ್ಭದಲ್ಲಿ ವೈದಿಕ ಪುರೋಹಿತರು ಭಂಡಾರ ಬರಿದಾಗುವಂತೆ ಮಾಡಿಸಿದ್ದರಂತೆ. ಕನ್ನಡ ಭುವನೇಶ್ವರಿಯ ಪ್ರತಿಮೆ ಸ್ಥಾಪನೆ, ಗಂಗಾಜಲ ವಿತರಣೆ- ಇಂಥ ಹುಚ್ಚುತನದ ಅರ್ಥರಹಿತ ಕೆಲಸಗಳಿಗೆ ಬೊಕ್ಕಸ ಅಪವ್ಯಯವಾಗುತ್ತಿದೆ. ಮೂಲ ಸೌಲಭ್ಯಗಳಿಲ್ಲದ ಪಟ್ಟದ ಕಲ್ಲು, ಐಹೊಳೆ ಮುಂತಾದ ಐತಿಹಾಸಿಕ ಸ್ಥಳಗಳನ್ನು ಅಭಿವೃದ್ಧಿ ಪಡಿಸುವುದು ಬಿಟ್ಟು ಹೇಮಮಾಲಿನಿಯ ನೃತ್ಯದಂತಹವಕ್ಕೆ ಹಣ ಸೂರೆಯಾಗುತ್ತಿದೆ. ಎಲ್ಲಿನೋಡಿದರೂ ಉತ್ಸವ; ಅವಕ್ಕೆ ಕೋಟಿ ಕೋಟಿ ಅನುದಾನ. ಜನರ "ಹೊಟ್ಟೆಗೆ ಹಿಟ್ಟು ಇಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು "(ಉತ್ಸವಗಳು) ಎಂಬಂತಾಗಿದೆ. "ಹುಚ್ಚು ಮುಂಡೆ ಮದುವೇಲಿ ಉಂಡವನೆ ಜಾಣ." ಉತ್ಸವಗಳ ಸಂಯೋಜಕರಾದ ರಾಜಕೀಯ ಧುರೀಣರು ಮತ್ತು ಅಧಿಕಾರಿಗಳಿಗೆ ಸುಗ್ಗಿಯೋ ಸುಗ್ಗಿ, ಅವರ ಬಾಯಿಗೆ ಮಾತ್ರ ಹುಗ್ಗಿ!

ಪೂಜ್ಯ ಶ್ರೀ ಜಗದ್ಗುರು ಮಾತಾಜಿಯವರ
66ನೆಯ ವರ್ಧಂತಿ

ಪೂಜ್ಯ ಶ್ರೀಮನ್ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ದಿ.13-3-1946 ರಂದು ಜನಿಸಿದ್ದು ದಿ.13-3-2011ರಂದು 65 ವರ್ಷ ಪೂರೈಸಿ 66ಕ್ಕೆ ಪಾದಾರ್ಪಣ ಮಾಡಲಿದ್ದಾರೆ. ಅಂದು ಅವರ 66ನೆಯ ವರ್ಧಂತಿಯನ್ನು ಆಚರಿಸಲಾಗುತ್ತಿದೆ.

ದಿ.12 ಮತ್ತು ದಿ.13-3-2011ರಂದು ಗುಂಡ್ಲುಪೇಟೆಯಲ್ಲಿ

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನವು ಚಾಮರಾಜ ನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲಿ ನಡೆಯುತ್ತಿದ್ದು, ದಿ.13ರಂದು ಸಂಜೆ 5-00ರಿಂದ ಪ್ರವಚನ ವೇದಿಕೆಯ ಮೇಲೆ ಪೂಜ್ಯ ಮಾತಾಜಿಯವರ 66ನೆಯ ವರ್ಧಂತಿಯನ್ನು ಆಚರಿಸಲಾಗುತ್ತದೆ. ದಿ.12ರಂದು ಪೂಜ್ಯ ಮಾತಾಜಿಯವರಿಂದ ವಿಶೇಷ ಪ್ರವಚನ ದಿ.ಅಭಿನಂದನೆ ಮತ್ತು ಪ್ರವಚನ ಮುಕ್ತಾಯ. ಪೂಜ್ಯ ಮಾತಾದ್ವಯರ ದಿವ್ಯ ಸನ್ನಿಧಿಯಲ್ಲಿ ಪ್ರವಚನದ ಸಮಾರೋಪ ಸಮಾರಂಭವು ನೆರವೇರಲಿದೆ.

ದಿ.20ರಂದು ಬೆಂಗಳೂರು ಬಸವ ಮಂಟಪದಲ್ಲಿ

ಬೆಂಗಳೂರಿನ ರಾಜಾಜಿನಗರದ 2ನೇ ಬ್ಲಾಕ್, 20ನೇ ಮುಖ್ಯರಸ್ತೆ (ಸಿಟಿ ಹಾಸ್ಪಿಟಲ್ ಪಕ್ಕ) ಇರುವ ಬಸವ ಮಂಟಪದಲ್ಲಿ ಪೂಜ್ಯ ಮಾತಾಜಿಯವರ ದಿವ್ಯ ಸನ್ನಿಧಿ ಹಾಗೂ ಉಪಸ್ಥಿತಿಯಲ್ಲಿ ಭಾನು (ದೇವ) ವಾರ ಬೆಳಿಗ್ಗೆ 10-30ರಿಂದ 66ನೆಯ ವರ್ಧಂತಿ ಉತ್ಸವವು ನಡೆಯಲಿದೆ. ಅನೇಕ ಜನ ಸ್ವಾಮಿಗಳು ಹಾಗೂ ಗಣ್ಯರು ಭಾಗವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಬೇಕೆಂದು ಕೋರುತ್ತಿದ್ದೇವೆ.

ರಾಷ್ಟ್ರೀಯ ಬಸವ ದಳ, ಬೆಂಗಳೂರು

ಕಲ್ಯಾಣ ಕಿರಣದ ಚಂದಾದಾರರ ನಿರ್ವಹಿಸಲು ಮತ್ತು ದೂರುಗಳನ್ನು ಕಡಿಮೆಗೊಳಿಸಲು ಸಾಫ್ಟವೇರ್ ಅನ್ನು ಅಳವಡಿಸಲಾಗಿದೆ. ಎಲ್ಲಾ ಚಂದಾದಾರರು ತಪ್ಪದೆ ತಮ್ಮ ತಮ್ಮ ದೂರವಾಣಿ ಸಂಖ್ಯೆಯೊಂದಿಗೆ ವಿಳಾಸ, ಪಿನ್‌ಕೋಡ್ ಮತ್ತ ಇ-ಮೇಲ್ ಐಡಿ ಲಭ್ಯವಿದ್ದಲ್ಲಿ ಈ ಕೆಳಗಿನ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್. ಮುಖಾಂತರ ಕಳುಹಿಸಬೇಕು.

ಮೊ: 8892912123, 9738028585, kalyanakirana1970@gmail.com

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666





ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್
ಉಳವಿ ರಸ್ತೆ, ಧಾರವಾಡ ಸಂಸ್ಥೆಯಿಂದ

ಶರಣೋತ್ಸವ ಕಾರ್ಯಕ್ರಮ

2011, ಏಪ್ರಿಲ್ 30, ಮೇ 1 ಮತ್ತು 2 ರಂದು

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ ಒಂದು ವಿಶ್ವಸ್ಥ ಸಂಸ್ಥೆ ಇದ್ದು 1968ರಲ್ಲಿಯೇ ಸ್ಥಾಪನೆಗೊಂಡಿದೆ. ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು 1967ರಲ್ಲಿಯೇ ಜಮೀನನ್ನು ಖರೀದಿಸಿ ಅಕ್ಕಮಹಾದೇವಿ ಆಶ್ರಮ ನಿರ್ಮಾಣ ಆರಂಭಿಸಿದರು. ವಿಶ್ವಗುರು ಬಸವಣ್ಣನವರು ಪುರುಷರಷ್ಟೇ ಸ್ತ್ರೀಯರಿಗೂ ಧಾರ್ಮಿಕ, ಸಾಮಾಜಿಕ ಹಕ್ಕುಗಳು ಲಭ್ಯವಾಗಬೇಕೆಂಬ ಕಳಕಳಿಯಿಂದ ಮಹಿಳೆಯರಿಗೂ ಧಾರ್ಮಿಕ ಸಂಸ್ಕಾರ ಕೊಟ್ಟುದಲ್ಲದೆ, ಸಾಮಾಜಿಕ ಸಮಾನತೆಯನ್ನು ಒದಗಿಸಿದರು. ಮಹಿಳಾ ಕುಲದ ಪ್ರತಿನಿಧಿಯಾಗಿ ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿ ಅನುಭವ ಮಂಟಪದಲ್ಲಿ ಆಚಾರ್ಯ ಪದವಿಯಿಂದ ಗೌರವಿಸಲ್ಪಟ್ಟಳು.

ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿಯ ಹೆಸರಿನಲ್ಲಿ ಅನುಭಾವ ಪೀಠವೊಂದನ್ನು ಸ್ಥಾಪಿಸಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅದಕ್ಕೆ ಪೂಜ್ಯ ಶ್ರೀ ಮಾತೆ ಮಹಾದೇವಿಯವರನ್ನು ಪ್ರಥಮ ಪೀಠಾಧೀಶರನ್ನಾಗಿ ದಿ. 21-4-1970ರಂದು ಪೀಠಾರೋಹಣ ಮಾಡಿಸಿದರು. ಈ ಐತಿಹಾಸಿಕ ಪೀಠಾರೋಹಣವು ನಡೆದುದು ಜಗನ್ಮಾತಾ ಅಕ್ಕಮಹಾದೇವಿ ಜಯಂತಿಯಂದು.

ಟ್ರಸ್ಟ್ ವತಿಯಿಂದ ಪ್ರಾರ್ಥನಾ ಮಂದಿರ-ಬಸವ ಮಂಟಪವನ್ನು ಮತ್ತು ದಾಸೋಹ ಶಾಲೆಯನ್ನು ಕಟ್ಟಿಸಲಾಗಿದೆ. ಪ್ರತಿ ದೇವ (ಭಾನು)ವಾರ ಶರಣ ಸಂಗಮ -ಸಾಮೂಹಿಕ ಪ್ರಾರ್ಥನೆಯು ಬೆಳಿಗ್ಗೆ 11ರಿಂದ 1-30ರವರೆಗೆ ನಡೆಯುತ್ತದೆ. ಪ್ರಾರ್ಥನೆ-ಪ್ರವಚನದ ನಂತರ ಪ್ರಸಾದ ದಾಸೋಹವಿರುತ್ತದೆ. ಶರಣರ ಜಯಂತಿ, ಲಿಂಗೈಕ್ಯ ಸಂಸ್ಮರಣೆಯನ್ನು ವಿಶೇಷ ದಿನಗಳಂದು ಆಚರಿಸಲಾಗುವುದು. ಶಿವರಾತ್ರಿಯಂದು ಗಣಮೇಳವನ್ನು ಪಥ ಸಂಚಲವನ್ನು, ಬಸವ ಜಯಂತಿಯಂದು ಗುರು ಬಸವಣ್ಣನವರ ಭಾವಚಿತ್ರದ ಮೆರವಣಿಗೆಯನ್ನು ಶರಣ -ಶರಣೆಯರ ಪಥ ಸಂಚಲನವನ್ನು ಏರ್ಪಡಿಸಲಾಗುವುದು. ಎಡದ ಕೈಯಲ್ಲಿ ಲಿಂಗಪೂಜೆ ಬಲದ ಕೈಯಲ್ಲಿ ಜಂಗಮಸೇವೆ ಎಂಬ ಧರ್ಮಪಿತ ಬಸವಣ್ಣನವರ ವಾಣಿಯನ್ನು ಅನುಸರಿಸಲೋಸುಗ ಅನಾಥಾಶ್ರಮವನ್ನು ನಡೆಸಲಾಗುತ್ತಿದ್ದು 50 ಮಕ್ಕಳು ಅಭ್ಯಾಸ ಮಾಡುತ್ತಿದ್ದಾರೆ.

40 ವರ್ಷ ಕಾಲ ಅಖಂಡವಾಗಿ ಸಂಚರಿಸಿ ಧರ್ಮ ಪ್ರಚಾರ ಮಾಡಿದ ಜಂಗಮ ಮೂರ್ತಿ ಪೂಜ್ಯ ಲಿಂಗಾನಂದ ಸ್ವಾಮಿಗಳು ದಿ. 30 -6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದರು. ಕೂಡಲ ಸಂಗಮದಲ್ಲಿ ದಿ. 13-1-1992ರಂದು ಬಸವ ಧರ್ಮದ ಪರಮೋಚ್ಚ ಪೀಠವನ್ನು ಏರಿದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಲಿಂಗೈಕ್ಯರಾದ ಬಳಿಕ ಪೂಜ್ಯ ಗುರುಗಳ ಸದಿಚ್ಛೆಯಂತೆ ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ದಿ. 13-1-1996ರಂದು ಆರೋಹಣ ಮಾಡಿದರು. ಮತ್ತು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಕ್ಕೆ ದ್ವಿತೀಯ ಪೀಠಾಧೀಶರನ್ನಾಗಿ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರನ್ನು 1996ರ ಅಕ್ಕನ ಹುಣ್ಣಿಮೆ

yಯಂದು ಪೀಠಾರೋಹಣ ಮಾಡಿಸಿದರು. ಉಭಯ ಜಗದ್ಗುರುಗಳೂ ಕರ್ನಾಟಕ ಮಾತ್ರವಲ್ಲ ಇತರ ರಾಜ್ಯಗಳಾದ ದೆಹಲಿ, ಮಹಾರಾಷ್ಟ್ರ, ಆಂಧ್ರ, ತಮಿಳು ನಾಡುಗಳಲ್ಲಿ ಸಂಚರಿಸಿ ಪ್ರವಚನ, ಸಮ್ಮೇಳನಗಳನ್ನು ಮಾಡಿರುವುದೇ ಅಲ್ಲದೆ ಸಂಸ್ಥೆಯ ಶಾಖೆಗಳನ್ನು ಬಸವ ಮಂಟಪಗಳನ್ನು ತೆರೆದಿದ್ದಾರೆ. ಕೂಡಲ ಸಂಗಮದಲ್ಲಿ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ಶರಣ ಮೇಳ, ಬಸವ ಕಲ್ಯಾಣದಲ್ಲಿ ಆಶ್ವಯುಜ ಶುದ್ಧ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆಯಂದು ಕಲ್ಯಾಣ ಪರ್ವ, ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ಯುಗಾದಿಯಿಂದ 3 ದಿವಸಗಳ ಕಾಲ ನಡೆಸಿಕೊಂಡು ಬರುತ್ತಿರುವ ಹೆಗ್ಗಳಿಕೆ ಪೂಜ್ಯ ಮಾತಾದ್ವಯರದು.

1970ನೆಯ ಇಸವಿಯ ಚೈತ್ರ ಪೌರ್ಣಿಮೆಯಂದು ಪ್ರಥಮ ಪೀಠಾರೋಹಣವಾಗಿ ನಂತರ ಆಗಾಗ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆಯಾದರೂ 1910ರಿಂದ ಇನ್ನು ಮುಂದೆ ಪ್ರತಿವರ್ಷವೂ ಅಕ್ಕಮಹಾದೇವಿ ಶರಣೋತ್ಸವವನ್ನು 3 ದಿವಸಗಳ ಕಾಲ ಹಮ್ಮಿಕೊಳ್ಳಬೇಕೆಂಬ ಸಂಕಲ್ಪ ತಾಳಲಾಗಿದೆ. ಇದಕ್ಕೆ ಶರಣ ಬಂಧುಗಳ ಒತ್ತಾಸೆಯೂ ಇದೆ. ಶನಿ(ಶರಣ)ವಾರ ದಿ.30ರಂದು ಬೆಳಿಗ್ಗೆ 10-30ರಿಂದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಕಾರ್ಯಕ್ರಮದ ಉದ್ಘಾಟನೆ, ಸಂಜೆ 5-30ರಿಂದ ಧರ್ಮಚಿಂತನಗೋಷ್ಠಿ. ದಿ. 01ರಂದು ಭಾನು(ದೇವ)ವಾರ ಧಾರವಾಡ ನಗರದಲ್ಲಿರುವ ಕಲಾಭವನದಲ್ಲಿ ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನ, ಸಾಮೂಹಿಕ ಪ್ರಾರ್ಥನೆ ಮತ್ತು ವಚನ ಪಠಣ. ಸೋಮ(ಶಿವ) ವಾರ ದಿ.02ರಂದು ಬೆಳಿಗ್ಗೆ ವಿಶೇಷ ಪೂಜೆ. 10-30ರಿಂದ ಪೀಠಾರೋಹಣದ 40ನೆಯ ವಾರ್ಷಿಕೋತ್ಸವ, ನಂತರ ಮೆರವಣಿಗೆ, ಸಮಾರೋಪ ಸಮಾರಂಭ.

3 ದಿವಸಗಳ ಈ ಕಾರ್ಯಕ್ರಮಕ್ಕೆ ಆಗಮಿಸುವ ಶರಣ ಬಂಧುಗಳಿಗೆ ಪ್ರಸಾದ (ಊಟ) ಮತ್ತು ವಸತಿಯ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಸಾರ್ವಜನಿಕರಿಂದ ಆರ್ಥಿಕ ನೆರವು ಕೋರುತ್ತೇವೆ. ದೇಣಿಗೆ ಕೊಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಒಂದು ಹೊತ್ತಿನ ಉಪಾಹಾರ, ಊಟದ ಖರ್ಚನ್ನು ಒಬ್ಬೊಬ್ಬರೇ ವಹಿಸಿಕೊಳ್ಳಬಹುದು.

ಮಹಾಪೋಷಕರು	5000ರೂ	ಹಿತೈಷಿಗಳು	500ರೂ
ಪೋಷಕರು	3000ರೂ	ವಿಶೇಷ ಸದಸ್ಯರು	250ರೂ
ದಾನಿಗಳು	1000ರೂ	ಸಾಮಾನ್ಯ ಸದಸ್ಯರು	100ರೂ

ದವಸ -ಧಾನ್ಯ, ಬೆಲ್ಲ - ಸಕ್ಕರೆ ಇತ್ಯಾದಿ ಪದಾರ್ಥಗಳನ್ನು ದೇಣಿಗೆಯಾಗಿ ನೀಡಬಹುದು. ಉದಾರವಾಗಿ ದೇಣಿಗೆ ನೀಡುವುದಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಆಶಿಸುವೆವು.

ಶುಭಹಾರೈಕೆಗಳೊಡನೆ

ಶರಣ. ಸಿದ್ಧಣ್ಣ ನಟೇಗಲ್
ಅಧ್ಯಕ್ಷರು , ರಾಷ್ಟ್ರೀಯ ಬಸವ ದಳ ,ಧಾರವಾಡ
ಶರಣ. ಎಸ್.ಎಲ್.ಗೌಡರು, ಧಾರವಾಡ
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ
ಶರಣ. ಕಲ್ಯಾಣಪ್ಪ ಪರಮಾದಿ
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಹುಬ್ಬಳ್ಳಿ
ಶರಣ. ಕರಿಬಸಪ್ಪ ಕೋರಿಶೆಟ್ಟರು
ಅಧ್ಯಕ್ಷರು, ಯುವ ರಾಷ್ಟ್ರೀಯ ಬಸವ ದಳ
ಮೊ : 9008202994/ 9341334828

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ
ಪೀಠಾಧ್ಯಕ್ಷೆ
ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ
ಉಳವಿ ರಸ್ತೆ, ರೇಲ್ವೆ ಗೇಟ್ ಬಳಿ
ಧಾರವಾಡ -580003
ದೂ: 0836-3204121

ಬಾಳೊಂದು ವರ ಬದುಕೊಂದು ಕಲೆ

1.ಯಾರಿಗಾಗಿ ಬಾಳಬೇಕು?

ಒಂದು ದಿವಸ ಲಲಿತಮ್ಮ ಎಂಬ ಶರಣೆ ಓರ್ವ ಪರಿಚಿತರನ್ನು ಕರೆದುಕೊಂಡು ಬಂದರು. "ಇವರು ಮೊದಲು ಇಲ್ಲಿ ಬಂದು ಸೇವೆ ಮಾಡುತ್ತಿದ್ದರು. ಅವರ ಜೀವನದಲ್ಲಿ ಒಂದು ದುರ್ಘಟನೆ ನಡೆಯಿತು. ಅವರಿಗೆ ಇದ್ದ ಒಬ್ಬನೇ ಮಗ ಅಪಘಾತದಲ್ಲಿ ಮಡಿದ. ಆಗ ಇವರು ತುಂಬಾ ಆಘಾತಕ್ಕೆ ಒಳಗಾದರು. ಇವರಿಗೆ ಇವರ ಹೆಂಡತಿಗೆ ಜೀವನವೇ ನಿಸ್ಸಾರವೆನಿಸಿ ಮಾಡುತ್ತಿದ್ದ ಅಡಿಗೆ ಕಾಯಕವನ್ನು ಬಿಟ್ಟು ಬಿಟ್ಟರು. ತಲೆ ಚಚ್ಚಿ ಕೊಂಡು ತಲೆಯ ಮೇಲೆ ಹೇಗೆ ಬುಗುಟುಗಳು ಎದ್ದಿವೆ ನೋಡಿರಿ. ನಾವು ಯಾರಿಗಾಗಿ ಬದುಕಬೇಕು? ಏತಕ್ಕೆ ದುಡಿಯಬೇಕು ಎಂದು ಹಲುಬುತ್ತಿದ್ದರು. ನಾವೆಲ್ಲ ಧೈರ್ಯ ಹೇಳಿ, ಈಗ ಚೇತರಿಸಿಕೊಂಡಿದ್ದಾರೆ. ಪುನಃ ಅಡಿಗೆ ಕಾಯಕ ಆರಂಭಿಸಿದ್ದಾರೆ". ಎಂದು ಲಲಿತಮ್ಮ ಹೇಳಿದರು. ಇದೇ ಇಂದಿನ (23.2.2011) ಪತ್ರಿಕೆಯಲ್ಲಿ ಬಂದಿದೆ. ಓರ್ವ ದಂಪತಿಗಳು ಪರಸ್ಪರ ಬಹಳ ಪ್ರೀತಿಯಿಂದ ಇದ್ದರು. ಚೊಚ್ಚಿಲ ಹೆರಿಗೆಗೆ ತಾಯಿ ಮನೆಗೆ ಹೋದ ಮಹಿಳೆ ಹೆರಿಗೆಯಾಗಿ 10 ದಿವಸಕ್ಕೆ ಅನಾರೋಗ್ಯಕ್ಕೆ ಒಳಗಾಗಿ ಚಿಕಿತ್ಸೆ ಫಲಕಾರಿ ಯಾಗದೆ ತೀರಿಕೊಂಡಳು. ಆ ಸುದ್ದಿ ಕೇಳಿದ ಪತಿ 5ನೇ ಅಂತಸ್ತಿನಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡ.

ಮಗನನ್ನು ಕಳೆದುಕೊಂಡ ತಾಯಿತಂದೆ ಇನ್ನು ಯಾರಿಗಾಗಿ ಬದುಕಬೇಕು? ಎಂದು ಹತಾಶರಾದರು. ಹೆಂಡತಿಯನ್ನು ಕಳೆದುಕೊಂಡ ಗಂಡ ಆತ್ಮಹತ್ಯೆಗೆ ಶರಣಾದ ಪರೀಕ್ಷೆಯ ಭಯದಿಂದ ಮತ್ತೊಬ್ಬ ಆತ್ಮಹತ್ಯೆ ಮಾಡಿಕೊಂಡ. ಇವೆಲ್ಲವೂ ಅಜ್ಞಾನದ ಕೃತ್ಯಗಳು, ಮನೋ ದೌರ್ಬಲ್ಯದ ಫಲಗಳು. ಯಾರಿಗಾಗಿ ಬದುಕಬೇಕು? ಇನ್ನೊಬ್ಬರಿಗಾಗಿ ಅಲ್ಲ, ತಮಗಾಗಿ ಬದುಕಬೇಕು. ಸ್ವಾರ್ಥವನ್ನು ಉದಾತ್ತೀಕರಿಸುವಾಗ ನಾವು ಹೇಳುವುದು ಹೀಗೆ "ಕೇವಲ ತಮಗಾಗಿ ಬದುಕಬಾರದು, ಪರರ ಹಿತಕ್ಕಾಗಿ ಬದುಕಬೇಕು". ಆದರೆ ಮೇಲಿನ ಪ್ರಸಂಗಗಳಲ್ಲಿ ಹೇಳುವುದು ಹೀಗೆ, "ಭೂಮಿಗೆ ಬರುವಾಗ ಒಬ್ಬನೇ ಬರುವುದು, ಹೋಗುವಾಗಲೂ ವ್ಯಕ್ತಿಯು ಒಬ್ಬನೇ ಹೋಗುವನು. ಮಧ್ಯದಲ್ಲಿ ಭೂಮಿಯ ಮೇಲಿರು ವಾಗ ಗಂಡ-ಹೆಂಡತಿ, ಮಕ್ಕಳು-ಮರಿ , ಬಂಧು-ಬಳಗ ಎಂಬ ಸಂಬಂಧ ಏರ್ಪಡುವುದು. ಜ್ಞಾನ ದೃಷ್ಟಿಯಿಂದ ಈ ಸಂಬಂಧಗಳನ್ನು ವಿಶ್ಲೇಷಿಸಿ, ಮಾಡುವ ಕರ್ತವ್ಯ ಗಳನ್ನು ಚಾಚೂ ತಪ್ಪದೆ ಮಾಡಬೇಕು. ನಿಜ ಜ್ಞಾನಿಯು ಯಾವುದರಿಂದಲೂ ಬಂಧಿತನಾಗಬಾರದು.

ತಾಯಿತಂದೆ ಎಷ್ಟು ಮಮಕಾರದಿಂದ ಮಕ್ಕಳನ್ನು ಸಾಕುವರು. ಅದೇ ಮಕ್ಕಳೆ ನಂತರದಲ್ಲಿ ಹೆಂಡತಿಯ ಮಾತುಕೇಳಿ ತಾಯಿತಂದೆಯರನ್ನು ದೂರ ಮಾಡುವರು, ವೃದ್ಧಾಶ್ರಮಕ್ಕೆ ಸಾಗಿಸುವರು, ಕೈ ಬಿಟ್ಟು ನಿಸ್ಸಹಾಯಕರನ್ನಾಗಿ ಮಾಡುವರು. ಇಂಥ ಸ್ಥಿತಿಯನ್ನು ಸಹ ನಿಜ ಜ್ಞಾನಿಗಳಾದವರು ಧೈರ್ಯದಿಂದ ನಿರ್ಲಿಪ್ತತೆಯಿಂದಲೇ ಎದುರಿಸ ಬೇಕು. ಆಗ ಮಾತ್ರ ಜೀವನವು ಒಂದು ವರವಾಗುವದೇ ವಿನಾ ಭಾರವಾಗದು. ಕೆಲ ವರು ಇಂಥ ವಿಲಕ್ಷಣ ನೋವು, ಆಘಾತ ಎರಗಿದಾಗ ದೇವರಲ್ಲಿ ವಿಶ್ವಾಸ ಕಳೆದುಕೊಳ್ಳು

ವುದುಂಟು. "ಎಲ್ಲಿಯ ದೇವರು! ದೇವರನ್ನು ನಂಬಿರುವ ನಮಗೆ ಇಂಥಾ ಕಷ್ಟ ಕೊಟ್ಟುಬಿಟ್ಟ". ಎಂದು ಹೇಳುವುದುಂಟು. ಇದು ತಪ್ಪು ಇದು ಜ್ಞಾನಿಗಳ ಚಿಂತನೆಯ ಬಗೆಯಲ್ಲ.

ಒಂದು ಊರಿನಲ್ಲಿ ಓರ್ವ ಜ್ಞಾನಿ ಗೃಹಸ್ಥನಿದ. ಆತನಿಗೆ ಒಬ್ಬನೇ ಮಗನಿದ್ದ. ಅವನು ಕಷ್ಟಪಟ್ಟು ಓದಿದ. ಒಂದು ಉತ್ತಮ ನೌಕರಿ ಸಿಕ್ಕಿತು. ಎಲ್ಲ ಕಷ್ಟಗಳು ಬಗೆ ಹರಿದವೆಂದು ಎಲ್ಲರೂ ಹರ್ಷಿಸುವಾಗಲೇ ಆ ಮಗ ಅಪಘಾತದಲ್ಲಿ ಮಡಿದ ಸುದ್ದಿ ಬಂದಿತು. ಶರಣ ಜೀವನವನ್ನು ನಡೆಸುತ್ತಿದ್ದ ಆ ಗೃಹಸ್ಥನನ್ನು ಕೆಲವರು ಸಂತೈಸುವ ನೆಪದಲ್ಲಿ ಮೂದಲಿಸಲು ತೊಡಗಿದರು."ದೇವರು ದೇವರು ಎಂದು ನಂಬಿದ್ದೆಯಲ್ಲ. ಎಲ್ಲಿದ್ದಾನೆ ದೇವರು? ನಿನ್ನ ಪೂಜೆಗೆ ಯಾವ ಅರ್ಥವಿದೆ?"

ಆಗ ಆ ಜ್ಞಾನಿ ಹೇಳಿದ, "ನಿಮ್ಮದೊಂದು ಮಾವಿನ ತೋಟವಿದೆ ಎಂದುಕೊಳ್ಳಿರಿ. ಅದನ್ನು ಗುತ್ತಿಗೆ ಕೊಡುವಿರಿ. ಗುತ್ತಿಗೆ ಪಡೆದವನು ತುಂಬಾ ಚೆನ್ನಾಗಿ ಉಸ್ತುವಾರಿ ಮಾಡುವನು. ಆಗ ನೀವು ಒಮ್ಮೆ ಹೋಗಿ, "ಚೆನ್ನಾಗಿ ತೋಟವನ್ನು ಕಾಯುತ್ತಿದ್ದೀಯೆ. ನನಗೆ ಒಂದೆರಡು ಹಣ್ಣು ಕೊಡು" ಎಂದು ಕೇಳುವಿರಿ. ಆಗ ಆ ಗುತ್ತಿಗೆ ಪಡೆದವನು ದುರ್ಜನನಾಗಿದ್ದರೆ, "ಸ್ವಾಮಿ ನಾನು ಗುತ್ತಿಗೆ ಪಡೆದಿದ್ದೇನೆ. ಕೊಡುವುದಿಲ್ಲ.' ಎನ್ನುವನು. ಸಜ್ಜನನಾಗಿದ್ದರೆ, "ಸ್ವಾಮಿ, ತೋಟದ ಮಾಲಿಕರು ನೀವು. ನಿಮಗೆ ಇಲ್ಲ ಎನ್ನುವೆನೆ? ನನ್ನ ಗುತ್ತಿಗೆ ತಾತ್ಕಾಲಿಕ; ತೆಗೆದುಕೊಳ್ಳಿರಿ ಎಂದು ಸಂತೋಷದಿಂದ ಹಣ್ಣುಗಳನ್ನು ಕೊಡುವನು. ಹಾಗೆ ಈ ಸಂಸಾರ ಎಂಬುದೊಂದು ತೋಟ. ನಾನು ಗುತ್ತಿಗೆ ಹಿಡಿದ್ದೇನೆ; ಸಂರಕ್ಷಣೆ ಮಾಡುತ್ತಿದ್ದೇನೆ. ನನ್ನ ಸಂಸ್ಕಾರ ವೃಕ್ಷದಲ್ಲಿ ಬಿಟ್ಟ ಫಲವಾದ ನನ್ನ ಮಗ ತನಗೆ ಬೇಕು ಎಂದು ದೇವರು ಇಷ್ಟಪಟ್ಟು ತೆಗೆದು ಕೊಂಡಿದ್ದಾನೆ. ನಾನೇಕೆ ದು:ಖಿಸಲಿ? ನಾನೇಕೆ ದೇವರಲ್ಲಿ ವಿಶ್ವಾಸ ಕಳೆದುಕೊಳ್ಳಲಿ?"

ಜೀವನದಲ್ಲಿ ಅನಿರೀಕ್ಷಿತ ದು:ಖಗಳು ಎರಗುತ್ತವೆ, ಪ್ರೀತಿ ಪಾತ್ರರನ್ನು ಕಳೆದುಕೊಳ್ಳುವ ಸನ್ನಿವೇಶ ಒದಗುತ್ತದೆ. ಆದರೂ ನಾವು ಎದೆಗೆಡಬಾರದು. ಏಕೆಂದರೆ ತನ್ನ ಜೀವನದ ಪರಿಪೂರ್ಣತೆಗಾಗಿ ಬಾಳ ಬೇಕೇ ವಿನಾ ಇನ್ನೊಬ್ಬರಿಗಾಗಿ ಅಲ್ಲ. ಇತರರೆಲ್ಲ ಪೂರಕವಾದವರು ಮಾತ್ರ, ಗುರಿ ಮುಟ್ಟಬೇಕಾದ ಯಾತ್ರಿಕ ತಾನೊಬ್ಬನೆ !

****

ಬದುಕು ಭಾರವಾಗಬಾರದು

ಜೀ ಟಿ.ವಿ.ವಾಹಿನಿಯವರು ಫೋನ್ ಮಾಡಿ 'ಬದುಕು ಜಟಕಾ ಬಂಡಿ' ಇದಕ್ಕೆ ಒಂದು ಸಂದರ್ಶನ ಬೇಕೆಂದರು. ನಾನಾಗ ಶಿವಮೊಗ್ಗದಲ್ಲಿದ್ದೆ. ಬೆಂಗಳೂರಿಗೆ ವಾಪಸ್ಸಾಗುತ್ತಲೇ ಪುನಃ ಕರೆ ಮಾಡಿದರು. ದಿ.23-2-2011ರಂದು ಸಂದರ್ಶನದ ರೆಕಾರ್ಡಿಂಗ್ ಇತ್ತು. ಚರ್ಚೆಯ ವಿಷಯ, "ಚಿತ್ರದುರ್ಗ ಮುರುಘಾಮಠದ ಶಾಖಾ ಮಠವಾದ ಶಿರಸಿಯ ಮಠಕ್ಕೆ ನೇಮಿಸಿದ್ದ ಸಾಧಕಿ ನಿವೇದಿತಾಳು ಚೇತನ ಎಂಬ ತರುಣನನ್ನು ಮದುವೆಯಾದ ಸಂಗತಿ. ಮಳೆ ಬಿಟ್ಟರೂ ಮರದ ಹನಿ ಬಿಡದು ಎಂಬಂತೆ ನಿವೇದಿತಾಳ ಪ್ರಸಂಗ ಇನ್ನೂ ಮಾಧ್ಯಮದವರಿಗೆ ಕುತೂಹಲಕಾರಿ

ಸಂಗತಿಯಾಗಿದೆ. ಒಂದಿಬ್ಬರು ದೊಡ್ಡ ಸಂಪ್ರದಾಯ ವೈದಿಕ ಮಠದ ಅಧಿಕಾರಿಗಳು ಪೀಠ ಸ್ವೀಕಾರದ ನಂತರ ಪೀಠ ತ್ಯಾಗ ಮಾಡಿ ಗೃಹಸ್ಥ ಜೀವನ ಸ್ವೀಕರಿಸಿ ಸುದ್ದಿ ಮಾಡಿದರು. ಇನ್ನು ಕೆಲವರು ವೈರಾಗ್ಯ ಜೀವನ ನಡೆಸುತ್ತೇವೆಂದು ಬಂದು ಸಾಧಕರಗಿ ನಂತರ ಅದು ಸಾಧ್ಯವಾಗದೆ ಮದುವೆಯಾಗಿ ಗೃಹಸ್ಥ ಜೀವನ ನಡೆಸುತ್ತಿದ್ದಾರೆ. ಹೀಗಾಗಿ ಇದೊಂದು ಸಹಜ ಪ್ರಕ್ರಿಯೆಯಾಗಿದೆ. ಆದರೆ ನಿವೇದಿತಾಳ ವಿಷಯದ ಮೇಲೆ ಮಾಧ್ಯಮಗಳವರು ಮತ್ತೆ ಮತ್ತೆ ಚರ್ಚಿಸಿ, ಗಮನ ಸೆಳೆಯುವುದು ಬಹಳ ವಿಲಕ್ಷಣವೆನಿಸುತ್ತದೆ.

ಈ ಚರ್ಚೆಯಲ್ಲಿ ನಿವೇದಿತಾ, ಚೇತನ್ ಅವರೂ ಪಾಲ್ಗೊಂಡಿದ್ದರು. ಆಕೆಗೆ ಒತ್ತಾಯ ಪೂರ್ವಕವಾಗಿ ಹದಿನಾರನೆಯ ವಯಸ್ಸಿಗೇ ದೀಕ್ಷೆ ಕೊಟ್ಟವರದೇ ತಪ್ಪು ಎಂದು ಒಬ್ಬ ಶ್ರೋತೃ ವಾದಿಸಿದರು. ಆಗ ಆಕೆ "ಇಲ್ಲ, ಒತ್ತಾಯ ಪೂರ್ವಕವಾಗಿ ಕೊಡಲಿಲ್ಲ. ನಾನೇ ಕೊಡಲು ಒತ್ತಾಯ ಮಾಡಿದೆ." ಎಂದು ಸ್ಪಷ್ಟಪಡಿಸಿದಳು. ಸನ್ಯಾಸ ಬಿಡಲು ಮುಖ್ಯವಾಗಿ 3 ಕಾರಣಗಳನ್ನು ಹೇಳಿದಳು. 1. ಅನಾಥ ಪ್ರಜ್ಞೆ ಕಾಡಿತು 2. ಕಟ್ಟುನಿಟ್ಟು ಬಹಳ, ಎಲ್ಲದಕ್ಕೂ ಟೀಕಿಸುವರು 3. ಸಮಾಜದಿಂದ ವಿರೋಧ.

ಸಾಮಾನ್ಯವಾಗಿ ಎಲ್ಲ ಸಾಧಕರಿಗೂ ಈ ಸಮಸ್ಯೆ ಬರುತ್ತದೆ. ಅನಾಥ ಪ್ರಜ್ಞೆ ಕಾಡದೆ ಇರಲು ನಾವು ದೇವರನ್ನು ನಂಬಿ, ಪ್ರೀತಿಸಬೇಕು. "ಚನ್ನಮಲ್ಲಿಕಾರ್ಜುನಯ್ಯ, ಆತ್ಮ ಸಂಗಾತಕ್ಕೆ ನೀನೆನಗುಂಟು."ಎಂಬ ಮಾತಿನ ಮೂಲಕ ಅಕ್ಕ ಸಾಧಕರಲ್ಲಿರುವ ಅನಾಥ ಪ್ರಜ್ಞೆಯನ್ನು ತೊಡೆದು ಹಾಕುತ್ತಾಳೆ. 'ನನಗೆ ಯಾರೂ ಇಲ್ಲ' ಎಂದು ಭಾವಿಸುವುದು ಅಜ್ಞಾನಿಯ ಲಕ್ಷಣ. ದೇವರೆ ನನ್ನ ರಕ್ಷಕನಾಗಿರುವಾಗ ಯಾರಿಗೆ ನಾನು ಹೆದರಬೇಕು ಎಂಬ ಆತ್ಮಬಲ ಜ್ಞಾನಿಯ ಲಕ್ಷಣ." ಲಿಂಗದೇವರ ರಾಜತೇಜದಲ್ಲಿ ಇಪ್ಪೆನಾಗಿ ಎಂಬ ಧರ್ಮಪಿತರ ವಾಣಿಯು ಸಹಜ ಅದೇ ಆತ್ಮವಿಶ್ವಾಸದಿಂದ ಕೂಡಿದೆ.

2ನೇ ಕಾರಣ, "ಕಟ್ಟುನಿಟ್ಟು ಬಹಳ, ಯಾವುದು ಮಾಡಿದರೂ ತಪ್ಪು ಎನ್ನುವರು" ಎಂಬ ನಿವೇದಿತಾಳ ಮಾತು ಅಪಕ್ವ. ಒಂದು ರೀತಿಯಲ್ಲಿ ಆಡಿಕೊಳ್ಳುವವರು ಜೀವನವನ್ನು ರೂಪಿಸುವವರೇ ಆಗಿರುತ್ತಾರೆ. "ತನ್ನ ಬೆನ್ನು ತನಗೆ ಕಾಣದು" ಎಂಬಂತೆ ಮನುಷ್ಯನಿಗೆ ತಾನು ಮಾಡುವ ತಪ್ಪು ತನ್ನ ಅರಿವಿಗೆ ಬಾರದು. ಬೇರೆಯವರು ಆಡಿಕೊಂಡಾಗ ತಾನು ಆತ್ಮ ನಿರೀಕ್ಷಣೆ ಮಾಡಿಕೊಳ್ಳಬೇಕು. ಕಟ್ಟುನಿಟ್ಟನ್ನು ಸ್ವಯಂ ಇಚ್ಛೆಯಿಂದ ಹೇರಿಕೊಳ್ಳಬೇಕು. "ನೀ ಕಟ್ಟಿ ಕೆಡಹಿದ ಬಂಧನವೇ ನಿರ್ಬಂಧನವೆಂದಿಪ್ಪೆನು". ಎಂಬ ಅಕ್ಕನ ಮಾತು ಉತ್ತಮ ಮಾರ್ಗದರ್ಶಿ. ಇನ್ನೂ ಮುಂದುವರಿದು ಅಕ್ಕನು ಹೇಳುವಳು.

"ಹೆದರದಿರು ಮನವೆ ಬೆದರದಿರು ತನುವೆ
ನಿಜವನರಿದು ನಿಶ್ಚಿಂತವಾಗಿರೆಲೆ ಮನವೆ.
ಫಲವಾದ ಮರನ ಇಡುವರೊಂದು ಕೋಟಿ
ಎಲವದ ಮರನ ಇಡುವರೊಬ್ಬರ ಕಾಣೆ
ಭಕ್ತಿಯುಳ್ಳವರ ಬೈವರೊಂದು ಕೋಟಿ
ಭಕ್ತಿ ಇಲ್ಲದವರ ಬೈವರೊಬ್ಬರ ಕಾಣೆಕೆ

ಚನ್ನಮಲ್ಲಿಕಾರ್ಜುನ ನಿಮ್ಮ ಶರಣರ ನುಡಿಯೆ
ಎನಗೆ ಗತಿಮತಿ ಸೋಪಾನ.

ಕೆಲವೊಮ್ಮೆ ಮತ್ಸರದಿಂದ, ಮತ್ತೆ ಕೆಲವೊಮ್ಮೆ ಅಜ್ಞಾನದಿಂದ ಜನರು ಟೀಕಿಸುವುದುಂಟು. ಇದಕ್ಕೆ ಅಂಜದೆ, "ನಿಜವನರಿದು ನಿಶ್ಚಿಂತವಾಗಿರಬೇಕು". 3ನೇ ಕಾರಣ ಸಮಾಜದಿಂದ ವಿರೋಧ! ಇದೂ ಅಷ್ಟೆ, ಭಿನ್ನ ವಿಚಾರದವರು ವಿರೋಧಿಸುವುದು ಸಹಜ. ಯಾವಾಗಲೂ ಸತ್ಯಕ್ಕೂ ಸಂಪ್ರದಾಯಕ್ಕೂ ಸಂಘರ್ಷ ಇದ್ದೇ ಇರುತ್ತದೆ. ಇದನ್ನೆಲ್ಲ ನೋಡಿದಾಗ ನಿವೇದಿತಾಳಿಗೆ ಇನ್ನೂ ಮಾನಿಸಿಕ ಪಕ್ವತೆ ಬಂದಿರಲಿಲ್ಲ ಎನ್ನಿಸುವುದು. "ವಜ್ರಾದಪಿ ಕಠೋರಾನಿ ಕುಸುಮಾದಪಿ ಮೃದೂನಿ" ಎಂಬ ಮಾತು ಪರಮ ಸತ್ಯ. ವೈರಾಗ್ಯ ಮಾರ್ಗಕ್ಕೆ ಬರುವಾಗ, ಬಂದಾದ ಮೇಲೆ ಮನಸ್ಸು ವಜ್ರಕ್ಕಿಂತಲೂ ಕಠಿಣ, ಮಾನವೀಯ ಸಮಸ್ಯೆಗಳಿಗೆ ಸ್ಪಂದಿಸುವಾಗ ಹೂವಿಗಿಂತಲೂ ಮೃದು ಆಗುವುದು ಅವಶ್ಯವಿದೆ. ಜೊತೆಗೆ ಆಕೆಗೆ ಸದ್ಗುರುವಾಗಿ ಮಾರ್ಗದರ್ಶನ ಮಾಡುವ ಸೂಕ್ತ ವ್ಯಕ್ತಿ ದೊರೆತಿಲ್ಲ. ಕದಳಿ ಬನದ ಬಳಿ, ಶ್ರೀಶೈಲದಲ್ಲಿ ಇರುವ ಅಕ್ಕನಾಗಮ್ಮ ಎಂಬ ವ್ಯಕ್ತಿ ಆಗಾಗ ಬರುತ್ತಾಳೆ. ಸನ್ಯಾಸಿಯಾಗಿಯೂ ಆಕೆಯ ಜೀವನ ವ್ಯರ್ಥವಾಗಿದೆ ಎಂದು ವಿಷಾದವೆನಿಸುತ್ತದೆ. ಮನೆ ತೊರೆದು ಬಂದ ನಾನು ಕದಳಿ ಬನಕ್ಕೆ ಹೋಗಿ ಸಾಧನೆ ಮಾಡುವೆ ಎಂದಾಗ ಪೂಜ್ಯ ಅಪ್ಪಾಜಿಯವರು, "ಏನೂ ಪ್ರಯೋಜನವಾಗದು; ಜೀವನ ವ್ಯರ್ಥವಾಗುತ್ತದೆ." ಎಂದು ಬುದ್ಧಿವಾದ ಹೇಳಿದರು. ಅಕ್ಕನಾಗಮ್ಮನ ಸ್ಥಿತಿ ನೋಡಿದಾಗಲೆಲ್ಲ ಪೂಜ್ಯ ಗುರುಗಳ ಹಿತೋಪದೇಶ ನೆನಪಿಗೆ ಬಂದು "ಸದ್ಗುರುವಿನ ಮಾರ್ಗದರ್ಶನ ಇಲ್ಲದಿರುವ ಸಾಧಕರ ಜೀವನ ಹೀಗೆಯೇ ಆಗುವುದಲ್ಲವೆ?" ಎನಿಸುತ್ತದೆ.

ನಿವೇದಿತ ಚೇತನ ಅವರನ್ನು ಮದುವೆಯಾಗಿ ಗೃಹಸ್ಥ ಜೀವನಕ್ಕೆ ಕಾಲಿಟ್ಟಿದ್ದು ಒಂದು ಬಗೆಯ ಪ್ರಾಮಾಣಿಕತೆಯೆ. ಒಂದು ಸಹಜ ಮತ್ತು ಸಾಮಾನ್ಯ ಪ್ರಕ್ರಿಯೆಗೆ ಇಷ್ಟು ಪ್ರಾಮುಖ್ಯತೆ ಕೊಡುವುದು ಬಹಳ ವಿಚಿತ್ರವೆನಿಸುತ್ತದೆ. ಒತ್ತಾಯದ ಹೇರಿಕೆ ಸಂಸಾರಕ್ಕೂ ಸರಿಯಲ್ಲ ಸನ್ಯಾಸಕ್ಕೂ ಸರಿಯಲ್ಲ. ಉತ್ಕಟ ವೈರಾಗ್ಯ ಇರುವವರನ್ನು ಒತ್ತಾಯದಿಂದ ಸಂಸಾರಕ್ಕೆ ಎಳೆಯುವ ಕೆಲಸವನ್ನು ಕೆಲವರು ಮಾತಾಪಿತೃ ಬಂಧು ಬಾಂಧವರು ಮಾಡಿದರೆ, ಆಸಕ್ತಿ ಇಲ್ಲದವರಿಗೆ ಒತ್ತಾಯ ಪೂರ್ವಕವಾಗಿ ಸನ್ಯಾಸಿಗಳನ್ನಾಗಿ ಮಾಡುವ ಪ್ರಕ್ರಿಯೆಯೂ ಮಠ-ಪೀಠಗಳ ಆಸ್ತಿ ಉಳಿಸಿಕೊಳ್ಳುವ ಸಲುವಾಗಿ ಮಾಡಲಾಗುವುದು. ಇದೂ ಅಸಹಜವೆ! ಆದ್ದರಿಂದ ಸ್ವಯಂ ಪ್ರೇರಣೆಯಿಂದ ಮರಳಿ ಸನ್ಯಾಸಿಯಾಗುವವರಿಗೆ ಅವಕಾಶ ಇರಬೇಕು. ಅದರಂತೆ ಕೈಲಾಗದೆ ಮರಳಿ ಸಂಸ್ಕಾರಕ್ಕೆ ಹೋಗುವವರಿಗೂ ದಾರಿ ಮುಕ್ತವಾಗಿರಬೇಕು ಅವರನ್ನು ವಿಚಿತ್ರ ಕಣ್ಣುಗಳಿಂದ ನೋಡಬಾರದು

ಫೆಬ್ರವರಿ ಕಲ್ಯಾಣ ಕಿರಣ ಪ್ರಕಾಶನವಾಗದುದಕ್ಕೆ ವಿಷಾದ

ಶರಣ ಮೇಳದ ನಂತರ ಜನಗಣತಿಯ ಪ್ರಚಾರಕ್ಕಾಗಿ ವ್ಯಾಪಕವಾದ ಪ್ರವಾಸವನ್ನು ಫೆಬ್ರವರಿ 13ರವರೆಗೆ ಮಾಡಬೇಕಾಯಿತಾದ್ದರಿಂದ ಫಬ್ರವರಿ ಕಲ್ಯಾಣ ಕಿರಣ ಸಿದ್ಧಪಡಿಸಿ ದಿ.20ರಂದು ಅಂಚೆಗೆ ಹಾಕಲು ಸಾಧ್ಯವಾಗದುದಕ್ಕೆ ವಿಷಾಸಿಸುತ್ತೇವೆ. ಮಾರ್ಚ್ ಕಲ್ಯಾಣ ಕಿರಣ ಇದೀಗ ಓದುಗರ ಕೈ ಸೇರುತ್ತಿದೆ.

ಸಕಾರಾತ್ಮಕ ಚಿಂತನೆಯಿಂದ ಸಾರ್ಥಕತೆ

– ಪೂಜ್ಯ ಶ್ರೀ ಬಸವ ಪ್ರಭು ಸ್ವಾಮೀಜಿ
ಬಸವಕಲ್ಯಾಣ.

ಇಂದಿನ ಜಗತ್ತಿನಲ್ಲಿ ನಾವು ಜಡ-ಭೌತಿಕ ವಸ್ತುವಿನಂದ ಹಿಡಿದು ಚೈತನ್ಯಾತ್ಮಕ ಜೀವಿಗಳವರೆಗೆ, ಏಕಕೋಶ ಜೀವಿಗಳಿಂದ ಹಿಡಿದು ಬಹುಕೋಶ ಜೀವಿಗಳವರೆಗೆ ಅವುಗಳ ಚಲನಾತ್ಮಕ ಚಟುವಟಿಕೆಗಳನ್ನು ಗಮನಿಸುತ್ತಾ ಇದ್ದೇವೆ. ಅವುಗಳ ಆಹಾರ ಪದ್ಧತಿ, ಜೀವಿಸುವ ವಿಧಾನ, ಅವುಗಳ ಬೌದ್ಧಿಕ ವಿಕಾಸ, ದೈನಂದಿನ ಬದುಕು, ಈ ವಿಚಾರವನ್ನು ನಾವು ನೋಡಿದಾಗ ಇವೆಲ್ಲವುಗಳ ಹಿಂದೆ ಒಂದು ಸದುದ್ದೇಶ ಮತ್ತು ದೇವನ ಕೈಚಳಕ ವಿಸ್ಮೃತವಾದದ್ದು. ಅಬ್ಬಾ! ಒಂದು ಸಾಮಾನ್ಯ ಇರುವೆಯಂಥ ಸಣ್ಣಜೀವಿ ನಿರಂತರ ಚಟುವಟಿಕೆಯಿಂದ, ತನ್ನ ಗೂಡಿನ ಕಡೆ ಆಹಾರವನ್ನು ತೆಗೆದುಕೊಂಡು ಹೋಗುವ ರೀತಿ, ಅದರ ಶಿಸ್ತಿನ ಸಿಪಾಯಿತನ, ಅದರ ಸಾಲು ಸರಪಳಿ ಆಕಾರದಲ್ಲಿ ಸಾಗುವ ಚಲನೆ ಬಹಳ ಅದ್ಭುತವಾಗಿದ್ದು, ಅದೇ ರೀತಿ ಒಂದು ಸೊಳ್ಳೆ ಕೂಡ ತನ್ನ ಆಹಾರಕ್ಕಾಗಿ ಮನುಷ್ಯನ ರಕ್ತವನ್ನು ಹೀರಲು ಆಕ್ರಮಣ ಮಾಡುವ ಶೈಲಿ, ನೀವು ಅದನ್ನು ಹಿಡಿಯಲು ಹೋದಾಗ ಅದು ತಪ್ಪಿಸಿಕೊಂಡು ಮತ್ತೆ ಪುನಃ ನಿಮ್ಮ ಮೇಲೆ ಆಕ್ರಮಿಸುತ್ತೆ, ಧೈರ್ಯದಿಂದ ಅಬ್ಬಾ! ಅದರ ಸಕಾರಾತ್ಮಕ ಹೋರಾಟ ಹಾಗೂ ಮತ್ತೊಂದು ಮಗದೊಂದು ಕಡೆ ಹೋಗುವ ರೀತಿ ವಿಸ್ಮಯ. ಪಕ್ಷಿಗಳ ಬಗ್ಗೆ ವಿಚಾರ ಮಾಡಿದಾಗ ಹಮ್ಮಿಂಗ ಬರ್ಡ್ ಎನ್ನುವ ಒಂದು ಸಣ್ಣ ಪಕ್ಷಿ ಸಾವಿರ ಸಾವಿರ ಮೈಲುಗಳವರೆಗೆ ಆಹಾರವನ್ನು ಹುಡುಕುತ್ತಾ ಹೊರ ದೇಶಕ್ಕೆ ಹೋಗಿ ಪುನಃ ಮರಳಿ ತನ್ನ ಗೂಡು ಸೇರಿಕೊಳ್ಳುತ್ತೆ, ಹಾಗೆಯೇ ಕಿಂಗ್ ಫಿಶರ್ ಎನ್ನುವ ಹಕ್ಕಿ ಅದೆಷ್ಟು ತೀಕ್ಷ್ಣವಾದ ಹಾರಿ ಬಂದು ಮೀನನ್ನು ಹಿಡಿಯುತ್ತೆ. ತನ್ನ ಆಹಾರಕ್ಕಾಗಿ. ಇದೇ ರೀತಿ ಅನೇಕ ಪಕ್ಷಿಗಳು ಸಹಿತ ಹಾರಾಡುವ ಲೋಕದಲ್ಲಿ ವಿಸ್ಮಯ ಚಿತ್ತಾರವನ್ನು ಆಗಸದಲ್ಲಿ ಮೂಡಿಸುತ್ತವೆ. ನಿರಂತರ ಚಲನವಲನದಲ್ಲಿರುತ್ತವೆ. ತಮ್ಮದೇ ಬುದ್ಧಿಮಟ್ಟದ ಗತ್ತಿನಂದ ಇವು ಯಾವು ಸಹಿತ ಮಾನವನಂತೆ ಬ್ಯಾಂಕ ಠೇವಣಿ ಮಾಡಿಕೊಂಡಿಲ್ಲ ; ಸುಂದರವಾದ ಬಂಗಲೆ ಇಲ್ಲ. ಕಾರು ಇಲ್ಲ. ಉಟ್ಟುಕೊಳ್ಳಲಿಕ್ಕೆ ಬಟ್ಟೆ ಇಲ್ಲ. ಆದರೆ ಸಂತೋಷದಿಂದ ಜೀವನ ಸಾಗಿಸುತ್ತವೆ. ಪ್ರಾಣಿಗಳೂ ಅಷ್ಟೇ. ಕುದುರೆ ಅದೆಷ್ಟು ವೇಗವಾಗಿ ಚಲಿಸುತ್ತೆ. ಅದರ ಪಾದಗಳ ಚಟ್ ಪಟ್‌ನಾದ ಕೇಳುವವರ ಮನಸ್ಸನ್ನು ಸೂರೆಗೊಳಿಸುತ್ತೆ. ಇದೇ ತರಹ ಅನೇಕ ಪ್ರಾಣಿಗಳು ಈ ಜಗತ್ತಿನಲ್ಲಿ ತಾವು ಬದುಕಲು ಅದ್ಭುತ ವಿಧಾನವನ್ನೇ ಅನುಸರಿಸುತ್ತವೆ.

ಅದೇ ರೀತಿ ಭೌತಿಕವಾಗಿ ನಾವು ನೋಡಿದಾಗ ಸೌರವ್ಯೂಹದಲ್ಲಿ ಸೂರ್ಯ ದಿನನಿತ್ಯ ಆಕಾಶದಲ್ಲಿ ತನ್ನ ಛಾಪನ್ನು ಮೂಡಿಸುತ್ತದೆ. ಉದಯ ಮತ್ತು ಅಸ್ತಮಾನವು ಒಂದು ನಿಮಿಷ ಕೂಡ ವ್ಯತ್ಯಾಸವಾಗದೇ ನಿರಂತರ ಕಾರ್ಯ ನಡೆದಿರುತ್ತೆ, ಚಂದ್ರ ಪ್ರತಿ ಹುಣ್ಣಿಮೆಗೊಮ್ಮೆ ಬೆಳಕನ್ನು ಕೊಡುತ್ತಾ, ಪ್ರತಿ ಅಮಾವಾಸ್ಯೆಗೊಮ್ಮೆ ಕತ್ತಲಾಗುತ್ತಾ ತನ್ನದೇ ಛಾಪು ಮೂಡಿಸುತ್ತದೆ. ಹೀಗೆ ಅದೆಷ್ಟೋ ಬೃಹದಾಕಾರದ ನಕ್ಷತ್ರಗಳು, ಆಕಾಶ ಕಾಯಗಳು, ಗ್ಯಾಲಾಕ್ಸಿಗಳು, ಗ್ರಹಗಳು ತಮ್ಮ ನಿರಂತರ ಚಟುವಟಿಕೆಯಿಂದ ಆಕಾಶದಲ್ಲಿ ರಂಗು ರಂಗಾಗಿ ಸುಂದರವಾಗಿ ತಮ್ಮ ಕಾರ್ಯ ಮಾಡುತ್ತಾ ಹೋಗುತ್ತಿವೆ.

ಅಂದ ಹಾಗೆ ಮಾನವನು ಕೂಡ ತನ್ನ ಬುದ್ಧಿ ಮಟ್ಟಕ್ಕೆ ತಕ್ಕಂತೆ ಈ ವೈಜ್ಞಾನಿಕ ರಂಗದಲ್ಲಿ ಏನೆಲ್ಲಾ ಕಂಡು ಹಿಡಿದಿದ್ದಾನೆ. ಹಕ್ಕಿಯಂತೆ ಹಾರಲು ವಿಮಾನ, ಮೀನಿನಂತೆ ಈಜಲು ಹಡಗು, ಕುಳಿತಲ್ಲೆ ಇಡೀ ಜಗತ್ತನ್ನು ನೋಡುವ, ತೋರಿಸುವ, ಕಂಪ್ಯೂಟರ್ ಕ್ಷಣಕ್ಷಣಕ್ಕೂ ಕುತೂಹಲ ಕೆರಳಿಸುವ ದೂರದರ್ಶನ. ಕ್ಷಣ ಹೊತ್ತಿನಲ್ಲೆ ವಿಷಯವನ್ನು ತಿಳಿದುಕೊಳ್ಳುವ, ತಿಳಿಸುವ ಮೊಬೈಲ್. ಇವೆಲ್ಲ ತಾಂತ್ರಿಕ ಜಗತ್ತನ್ನು ನಡೆಸಿಕೊಡುವ ಬಾಹ್ಯಕಾಶದಲ್ಲಿ ಹಾರಿಬಿಟ್ಟ ಉಪಗ್ರಹಗಳು, ಸೆಟ್‌ಲೈಟ್ ಹಾಗೂ ಕಾರು, ಬಸ್, ಟ್ರಕ್, ಬೈಕ್, ಫ್ಯಾಕ್ಟರಿ, ಗೃಹ ಬಳಕೆ ವಸ್ತುಗಳು, ಕ್ರೀಡಾಲೋಕ ಕ್ಯಾಮರಾ, ವಾಸಿಸಲು ಸುಂದರ ನೂರಾರು ವರ್ಷ ಹಾಳಾಗದ ಮನೆಗಳು, ಸುಂದರವಾಗಿ ಕಾಣಲು ಬಟ್ಟೆ, ಮೇಕಪ್. ಒಂದೇ ಎರಡೇ ಹೀಗೇ ಸಾವಿರ ಸಾವಿರ ಆವಿಷ್ಕಾರಗಳನ್ನು ಅನಾಗರಿಕ ಮಾನವನಿಂದ ಹಿಡಿದುಕೊಂಡು, ನಾಗರಿಕ ಮಾನವನವರೆಗೆ ಬೌದ್ಧಿಕ ಮಟ್ಟ ವಿಕಾಸವಾದಂತೆ ಕಂಡು ಹಿಡಿಯುತ್ತಾ ಬಂದಿದ್ದಾನೆ. ಆದರೆ ಇವೆಲ್ಲವನ್ನು ಕಂಡು ಹಿಡಿದ ಮನುಷ್ಯ ತಾನೆ ಸೃಷ್ಟಿಸಿದ ಅಣುಬಾಂಬ ಹಾಗೂ ಇನ್ನಿತರೆ ಸ್ಫೋಟಕ ವಸ್ತುಗಳ ಜಾಲದಿಂದ ಬಂಧಿತನಾಗಿದ್ದಾನೆ. ಇವುಗಳಿಂದ ಬಿಡುಗಡೆ ಯಾವಾಗ? ಇದರಿಂದ ಮುಕ್ತಿ ಯಾವಾಗ ? ಇವೆಲ್ಲವುಗಳಿಂದ ಬೇರೆ ಲೋಕವಿನ್ನೇನಾದರೂ ಇದೆಯೇ? ಮುಕ್ತಿ ಪಥವನ್ನು, ಮಾನಸಿಕ ತೊಳಲಾಟವನ್ನು ಬದಿಗೆ ಸರಿಸುವಂತಹ ಮತ್ತಿನ್ನಾವುದರ ಜಗತ್ತು ಇದೆಯೇ ? ಎಂಬ ಜಿಜ್ಞಾಸೆ ಹುಟ್ಟುತ್ತದೆ ಸಂಕಷ್ಟಗಳೊದಗಿದ ಮಾನವನಿಗೆ ಸರಿಯಾದ ಮಾರ್ಗ, ಪಥ, ದಾರಿ ಒಂದೇ. ಅದುವೇ ಅಧ್ಯಾತ್ಮ. ಶರಣರ ಸರಳವಾದ ಜೀವನ, ಆದರ್ಶದ ಬದುಕು ಸಕಾರಾತ್ಮಕ ಚಿಂತನೆ......... ಅದುವೇ ಈ ಇಂದಿನ ಈ ಪುಟ್ಟ ಲೇಖನದಲ್ಲಿ ಮೂಡಿಬರಲಿರುವ ಕ್ಷಣಹೊತ್ತಿನ ಚಿಂತನೆ.

ಶರಣರೇ, ಸಹೋದರರೇ, ಅಧ್ಯಾತ್ಮವೆಂದಾಕ್ಷಣ ನಮಗೆ ತಿಳಿಯುವುದು ತನ್ನೊಳಗೆ ತಾನು ತಿಳಿಯುವುದು. ಮನುಷ್ಯ ಏನೆಲ್ಲಾ ಬಾಹ್ಯವಾಗಿ ಕಂಡು ಹಿಡಿದರೂ ಸಹಿತ ತನ್ನನ್ನು ತಾನು ಅರಿತುಕೊಳ್ಳುವಲ್ಲಿ ವಿಫಲನಾಗಿದ್ದಾನೆ. ಸರಳವಾದ ಜೀವನವನ್ನು ಮಾಡಲು ಹಿಂದೆ ಉಳಿದಿದ್ದಾನೆ. ಅದಕ್ಕೆ ಡಾ॥ ರಾಧಾಕೃಷ್ಣನವರು ಅರ್ಥಗರ್ಭಿತವಾದ ನುಡಿಮುತ್ತು ಹೇಳಿದ್ದಾರೆ. Man has learn to swim like a fish in water, he has learnt to fly like a bird in air but he has not learn live like a man . ಹಕ್ಕಿಯಂತೆ ಹಾರಬಲ್ಲ, ಮೀನಿನಂತೆ ಈಜ ಬಲ್ಲ ಆದರೆ ಮನುಷ್ಯ ಮನುಷ್ಯನಂತೆ ಬದುಕಲು ಕಲಿತಿಲ್ಲ. ತುಂಬಾ ದುರದೃಷ್ಟಕರ. ಮಾನವ ತನ್ನನ್ನು ತಾನು ಅರಿತುಕೊಳ್ಳುವಲ್ಲಿ ವಿಫಲನಾಗಿದ್ದಾನೆ. ನಾನು ಯಾರು? ಎಲ್ಲಿಂದ ಬಂದೆ ? ಎಲ್ಲಿಗೆ ಹೋಗುವೆ? ಎಂದು ಆಂತರಿಕವಾಗಿ ತಿಳಿದುಕೊಳ್ಳುವುದೇ ಆಧ್ಯಾತ್ಮ. ಅದಕ್ಕಾಗಿ ಈ ವಿಷಯದಲ್ಲಿ ಸಾಕ್ರೇಟಿಸ್ ಒಂದು ಮಾತನ್ನು ಹೇಳುತ್ತಾರೆ. "ತನ್ನನ್ನು ತಾನು ಅರಿಯುವುದು ಬಲುಕಷ್ಟ!"

ಇದು ಬಹಳ ಮಹತ್ವದ್ದಾಗಿದ್ದು. ಪ್ರತಿಯೊಬ್ಬರು ಇನ್ನೊಬ್ಬರಿಗೆ ಹೇಳುವುದು ಸುಲಭ. ಆದರೆ, ತನ್ನನ್ನು ತಾನು ಕಾರ್ಯಚರಣೆಗೆ ತೊಡಗಿಸಿಕೊಳ್ಳುವುದೆಂದರೆ ಅದೆಷ್ಟು ಕಷ್ಟ. ಅದಕ್ಕೆ ಗುರು ಬಸವಣ್ಣನವರು ಹೇಳುತ್ತಾರೆ.

ಲೋಕದ ಡೊಂಕು ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ನಮ್ಮ ಲಿಂಗದೇವಾ.

ಅಂದಾಗ ನಾವು ಸರಳವಾದ ಜೀವನ, ಆಧ್ಯಾತ್ಮ ಕಷ್ಟವೆಂದು ಕೈಕಟ್ಟಿ ಕುಳಿತರೆ ? ಇವತ್ತು ಹೇಳುವ ತಿಳಿಸುವ, ಆಧ್ಯಾತ್ಮ ಪಥವ ತಿಳಿಸುವ ಹಾಗೂ ಮಕ್ಕಳಿಗೆ ಪಾಠ ಹೇಳಿಕೊಡುವ ಗುರುವು ಬೇಕಾಗಿರಲಿಲ್ಲ. ಆದರೆ ಇಲ್ಲಿ ಒಂದು ಮಾತು ತಿಳಿದುಕೊಳ್ಳುವುದೇನೆಂದರೆ, ತಿಳಿಸುವವರು ಮಾನಸಿಕವಾಗಿ ಸಬಲರಾಗಿ ನಡೆನುಡಿ ಒಂದಾಗಿ ಜ್ಞಾನವಂತರಾಗಿ ಇರಬೇಕು ಎನ್ನುವುದು ಮತ್ತು ಯಾವುದನ್ನು ಅವರು ಹೇಳಲಿಚ್ಛಿಸುವರೋ ಅದರ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡಿರಬೇಕೆಂಬುವುದು ಗುರು ಬಸವಣ್ಣನವರ ಆದೇಶ. ನಾವು ಏನು ತಿಳಿದುಕೊಳ್ಳಲಿಲ್ಲ ವೆಂದರೆ ಪಶು ಪಕ್ಷಿಗಳಿಗಿಂತ ಕನಿಷ್ಠರಾಗುತ್ತೇವೆ ಎನ್ನುತ್ತಾರೆ. ಮತ್ತೊಂದು ಕಡೆ,

ಕಾಗೆಯೊಂದಗುಳ ಕಂಡರೆ ಕೂಗಿ ಕರೆಯದೆ
ತನ್ನ ಬಳಗವನೆಲ್ಲವ
ಕೋಳಿ ಒಂದು ಕುಟುಕ ಕಂಡರೆ ಕೂಗಿ ಕರೆಯದೆ
ತನ್ನ ಕುಲವನೆಲ್ಲವ ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿರ್ದರೆ
ಕಾಗೆ ಕೋಳಿಗಳಿಗಿಂತ ಕರಕಷ್ಟ ಲಿಂಗದೇವಾ.

ಈ ಒಂದು ಭಕ್ತಿಪಕ್ಷವನ್ನು ಬೆಳೆಸಿಕೊಳ್ಳಲು ಏನು ಮಾಡಬೇಕು? ಶರಣರ ಸಾಧನೆ, ಆಧ್ಯಾತ್ಮ ಅತಿ ಸುಲಭವಾಗಿ ಗೆಲ್ಲಲು ಯಾವ ಮಾರ್ಗ ಹಿಡಿಯಬೇಕೆಂಬುದು ಪ್ರಶ್ನೆ ಅಲ್ಲವೇ? ಅದಕ್ಕೆ ಮಾಡಬೇಕಾದದ್ದು ಇಷ್ಟೇ. ಸಕಾರಾತ್ಮಕವಾದ ವಿಚಾರ (Positive thinking) ಮಾಡುವುದು. 12ನೇ ಶತಮಾನದಲ್ಲಿ 1,96 ಲಕ್ಷ ಸಾವಿರ ಶರಣರನ್ನು ಕಣ್ಣು ಮುಂದೆ ತಂದುಕೊಂಡಾಗ ಅವರು ಯಾವ ರೀತಿ ಆಧ್ಯಾತ್ಮ ತಿಳಿದುಕೊಂಡರು. ಅವರು ಅನುಸರಿಸಿದ ಮಾರ್ಗ ಏನು, ಗೊತ್ತೆ? ಒಳ್ಳೆಯ ವಿಚಾರ ಮತ್ತು ಸರಳವಾದ ಜೀವನ(good thinking & simple living) ಹಾಗೂ ಗುರು ಬಸವಣ್ಣನವರು ಕೊಡತಕ್ಕಂತಹ ಸಕರಾತ್ಮಕ ವಿಚಾರ ಹಾಗೂ ಅವರು ಹಾಕಿಕೊಟ್ಟ ಕಾಯಕ ಸಿದ್ಧಾಂತ,ಕಲಿಸಿಕೊಟ್ಟು, ನಿಷ್ಠೆಯಿಂದ ಅದೆಷ್ಟು ಜನ ಅಜ್ಞಾನಿಗಳು, ಸೋಮಾರಿಗಳು, ಶತ ಶತಮಾನಗಳಿಂದ ತುಳಿತಕ್ಕೊಳಗಾದವರು, ಪತಿತರು, ಪಾಮರರು, ಅಸ್ಪೃಶ್ಯರು ಪರಿವರ್ತನೆ ಯಾದರು. ಅಷ್ಟೆ ಅಲ್ಲದೆ ವಚನಗಳನ್ನು ಬರೆಯಲು ಅವರಿಗೆ ಶಕ್ತಿ ಬಂದಿದ್ದು ಗುರು ಬಸವಣ್ಣನವರ ಸಕರಾತ್ಮಕವಾದ ವಿಚಾರಧಾರೆಯಿಂದ. ಏಕದೇವನಿಷ್ಠೆ, ನೈತಿಕವಾದ ಕಾಯಕ ಸಿದ್ಧಾಂತ, ಆರ್ಥಿಕ ಸಿದ್ಧಾಂತ, ಯೋಗಾಂಗ ಮಾರ್ಗ ಈ ರೀತಿ ಸಕಾರಾತ್ಮಕವಾದ ಸೂಕ್ತಿಗಳನ್ನು ಕೊಟ್ಟಿದ್ದಷ್ಟೆ ಅಲ್ಲದೆ, ದುಃಖಕ್ಕೆ ಕಾರಣವೇನು, ಮನುಷ್ಯ ಸ್ವಾರ್ಥಿಯಾಗಲು ಕಾರಣವೇನು, ಎಂದು ಚಿಂತನೆ ನಡೆಸಿದ ಗುರು ಬಸವಣ್ಣನವರು ಅದಕ್ಕೆ ಬಲವಾದ ಕಾರಣವನ್ನು ಹುಡುಕಿದರು.

ದಿಟ ಪುಟ ಭಕ್ತಿ ಸಂಪುಟ ನೆಲೆಗೊಳ್ಳದಾಗಿ
ಟಿಂಬಕ ಟೀವಕನಾಡಿಸುತ್ತಿದ್ದಿತ್ತಯ್ಯಾ ನಿನ್ನ ಮಾಯೆ
ಟೀವಕ ಟಿಂಬಕನ ನಾಡಿಸುತ್ತಿದ್ದಿತ್ತಯ್ಯಾ ನಿನ್ನ ಮಾಯೆ
ಲಿಂಗದೇವಾ ಹೆಣ್ಣು ಹೊನ್ನು ಮಣ್ಣು ತೋರಿ.

ಅವರ ಈ ವಚನವನ್ನು ನೋಡಿದಾಗ, ಮಾನವನಲ್ಲಿ ಸ್ವಾರ್ಥ ಯಾವಾಗ ಬರುತ್ತೊ ಆಗ ತಮ್ಮ ಸರ್ವಸ್ವವನ್ನು ಕಳೆದುಕೊಂಡರೂ ಸಹಿತ, ಹೊಡೆದಾಟ ಬಡಿದಾಟ ನಿಲ್ಲದು. ಅಂತಹ ಸ್ವಾರ್ಥವೇ ಇಲ್ಲಿ ವ್ಯಕ್ತವಾಗಿದ್ದು, ಹೆಣ್ಣು, ಹೊನ್ನು, ಮಣ್ಣು ಎಂಡು. ಅದಕ್ಕಾಗಿ ಇಲ್ಲಿ ಶರಣರಿಗೆ ಈ ಹೆಣ್ಣು ಹೊನ್ನು ಮಣ್ಣಿನಿಂದ ವಿಚಲಿತರಾಗದೆ ಮತ್ತು ಅಂಟಿಯೂ ಅಂಟದಂತೆ ಬದುಕುವ

ಸಮತೋಲನವನ್ನು ಗುರು ಬಸವಣ್ಣನವರು ಕಲಿಸಿಕೊಟ್ಟರು. ಅಂದ ಹಾಗೆ ಈ ಹೆಣ್ಣಿನ ಆಪ್ಯಾಯನಕ್ಕೆ, ಹೊನ್ನಿನ ಆಪ್ಯಾಯನಕ್ಕೆ, ಮಣ್ಣಿನ ಆಪ್ಯಾಯನಕ್ಕೆ ನಮ್ಮ ಶರಣರು ಒಳಗಾದವರಲ್ಲ. ಅವರು ಬಳಸಿ ಬ್ರಹ್ಮಚಾರಿಗಳು, ಉಂಡು ಉಪವಾಸಿಗಳು. ವ್ಯವಹಾರಕ್ಕಾಗಿ ಬಳಕೆಯೇ ಹೊರತು ಅವುಗಳಿಗೆ ಜೀವ ಮೀಸಲಿಲ್ಲ. ಈ ಕ್ಷಣ ಭಂಗುರವಾದ ವ್ಯವಹಾರಕ್ಕಾಗಿ ಜೀವನ ವ್ಯರ್ಥ ಮಾಡಿಕೊಂಡಿಲ್ಲ. ಅಂದಾಗ ನಮಗೆ ನಶ್ವರವಾದ ಮೌಲ್ಯಗಳಿರುವ ಈ ಜಗತ್ತಿನಲ್ಲಿ ಸಕಾರಾತ್ಮಕವಾಗಿ ಹೋಗಲು ಅದೆಷ್ಟು ಮಾರ್ಗಗಳು ಸಿಗುತ್ತವೆ ಶರಣರ ವಚನ ಸಾಹಿತ್ಯದಲ್ಲಿ ಎಂಬುದು ಸತ್ಯ.

ಸಹೋದರರೇ, ಮಾನಸಿಕವಾಗಿ ಬಳಲಿದ್ದಿರಾ, ದೈಹಿಕವಾಗಿ ಕುಂದಿದ್ದೀರಾ, ಅಧ್ಯಾತ್ಮಿಕವಾಗಿ ಹಿಂದಿದ್ದೀರಾ. ಅನೇಕ ಒತ್ತಡಗಳಿಂದ ಬೆಂಡಾಗಿದ್ದಿರಾ ! ಹಾಗಾದರೆ ಕೆಲವೊಂದಷ್ಟು ಶರಣರ ನುಡಿ ಮುತ್ತುಗಳನ್ನು ಗಮನಿಸುವಾ, ಜೊತೆಗೆ ಅವರ ಮಾರ್ಗದಲ್ಲಿ ಸಾಗುವಾ, ಹೇಗೆ ಧೈರ್ಯವನ್ನು ತುಂಬುತ್ತವೆ, ನೋಡುವಾ.

ಹೆದರದಿರು ಮನವೆ ಬೆದರದಿರು ತನವೆ
ನಿಜವ ತಿಳಿದು ನಿಶ್ಚಿಂತವಾಗಿರು ಮನವೆ
ಬೆಟ್ಟದಂತಿರುವ ಅಪರಾಧವನ್ನು ಒಂದು ಬೊಟ್ಟಿನಲ್ಲಿ
ಕಳೆವ ಬಸವಪ್ರಿಯ ಕೂಡಲ ಚೆನ್ನ ಸಂಗಮದೇವಾ.

ಇದು ಅಕ್ಕನಾಗಲಾಂಬಿಕಾ ತಾಯಿಯವರ ವಚನ. ನಮಗೆ ಅದೆಷ್ಟು ಸಕಾರಾತ್ಮಕ ಧೈರ್ಯವನ್ನು ತುಂಬುತ್ತೆ. ಯಾವುದಕ್ಕೂ ನಾವು ಅಧೈರ್ಯ ತಾಳದೆ "ಬಂದಿದ್ದು ಬರಲಿ ನಿನ್ನೊಲುಮೆ ಇರಲಿ" ಎಂದು ಧೈರ್ಯದಿಂದ ನಡೆದಾಗ ನಾವು ಹಿಡಿದ ಕೆಲಸಗಳಿಗೆ ಯಶಸ್ಸು ಸಿಗುತ್ತೆ. ಜೊತೆಗೆ ಪರಮಾತ್ಮನ ಒಲುಮೆ ಆಗುತ್ತೆ ಎನ್ನುತ್ತಾರೆ. ಇಷ್ಟಕ್ಕೂ ಪರಮಾತ್ಮನು ನಮ್ಮ ಮೇಲೆ ಕರುಣೆ ತೋರಬೇಕಾದರೆ ಪರೀಕ್ಷೆಗಳನ್ನು ಒಡ್ಡುತ್ತಾ ಇರುತ್ತಾನೆ. ಅವ್ಯಾವಕ್ಕೂ ಹೆದರದೆ ಇದ್ದರೆ "ಕರವೆತ್ತಿ ಕೊಂಬುವನು" ಅಂಥದ್ದೊಂದು ವಚನ, ನಮ್ಮ ಜೇಡರ ದಾಸಿಮಯ್ಯನವರು ಹೇಳುತ್ತಾರೆ.

ಹರ ತನ್ನ ಭಕ್ತರ ತಿರಿವಂತೆ ಮಾಡುವ
ಒರೆದು ನೋಡುವ ಮಿಸುನಿಯ ಚಿನ್ನದಂತೆ
ಅರೆದು ನೋಡುವ ಚಂದನದಂತೆ
ಕೊರೆದು ನೋಡುವ ಕಬ್ಬಿನ ಕೋಲಿನಂತೆ
ಬೆದರದೆ ಬೆಚ್ಚದೆ ಇರ್ದಡೆ ಕರವಿಡಿದೆತ್ತಿಕೊಂಬ
ನಮ್ಮ ರಾಮನಾಥ.

ಒಬ್ಬ ವ್ಯಕ್ತಿ ಅಧ್ಯಾತ್ಮ ರಂಗದಲ್ಲಿರಬಹುದು ಅಥವಾ ಇನ್ನಾವುದೋ ರಂಗದಲ್ಲಿರ ಬಹುದು. ಸಾಧನೆ ಮಾಡಬೇಕಾದರೆ ಅಡೆ ತಡೆಗಳು, ಕಷ್ಟ ಕಾರ್ಪಣ್ಯಗಳು ಬಂದೇ ಬರುತ್ತವೆ. ಅನೇಕ ಪರೀಕ್ಷೆಗಳು ಎದುರಾಗುತ್ತವೆ. ಆದರೆ ಒಂದು ಮಾತು ತಿಳಿದುಕೊಳ್ಳಬೇಕು. ನಮ್ಮೊಳಗಿನ ಶಕ್ತಿಗಿಂತ ಹೊರಗಿನ ಶಕ್ತಿಗಳು ನಮ್ಮ ವಿರುದ್ಧ ಕೆಲಸ ಮಾಡಲಾರವು.

ಒಂದು ಸುಭಾಷಿತ ಹೀಗೆ ಹೇಳುತ್ತದೆ

ನೋ(No) ಎನ್ನಲು ಧೈರ್ಯಬೇಕು. ಸತ್ಯ ಎದುರಿಸಲು ಎದೆಗಾರಿಕೆ ಇರಬೇಕು. (ಸಕಾರಾತ್ಮಕ

ಆಲೋಚನೆ) ಸರಿಯಾದ ಹಾದಿಯಲ್ಲಿ ಸಾಗಲು ಸರಿಯಾದುದನ್ನೆ ಮಾಡಿರಿ. ಪ್ರಾಮಾಣಿಕತೆಯಿಂದ ಬದುಕಲು, ಇವೇ ಮಂತ್ರದಂಡಗಳಾಗಿರುತ್ತವೆ. ಇವತ್ತು ನಾವು ನೋಡುತ್ತೇವೆ ಬಹಳಷ್ಟು ಜನರು ಸಮಸ್ಯೆ ಜೊತೆ ಹೆಚ್ಚು ಹೊತ್ತು ಇರಲಾರರು. ಆದರೆ ಸಮಸ್ಯೆಯನ್ನು ಸವಾಲು ಎಂದು ಸ್ವೀಕರಿಸಿದರೆ ಬಹುಬೇಗ ಅದನ್ನು ಎದುರಿಸುವ ಛಲ, ಹುಮ್ಮಸ್ಸು ಬರುತ್ತದೆ. ನಮ್ಮ ಸಾಮರ್ಥ್ಯವನ್ನು ನಮಗೆ ಮನವರಿಕೆ ಮಾಡಿಕೊಡಲು ಸವಾಲು ಪ್ರೇರಣಾದಾಯಕ. ಆದ್ದರಿಂದ ಸಮಸ್ಯೆ ಬಂದಾಗ ಶರಣರ ವಚನಗಳ ಕಡೆ ಕಣ್ಣಾಡಿಸಿದಾಗ ಅದೆಷ್ಟು ಸಮಸ್ಯೆ ಇದ್ದರೂ ಪರಿಹಾರ ಸಿಕ್ಕೆ ಸಿಗುತ್ತೆ. ಕುಗ್ಗುವುದು ಬೇಡ.

ನಾವು ಕೆಲವೊಂದು ಸಲ ತಿಳಿದುಕೊಂಡಿರುತ್ತೇವೆ. ಒಳ್ಳೆಯ ಸಂಗತಿಗಳು ಮತ್ತು ಸಾಧನೆಗಳು ಬೇರೆಯವರ ಜೀವನದಲ್ಲಿ ಮಾತ್ರ ನಡೆಯುತ್ತವೆಯೆಂದು. ಆದರೆ ಉಳಿದವರಿಗೆ ನಾವು ಸಹ ಬೇರೆಯವರು ಎಂಬುದನ್ನು ಮರೆಯುತ್ತೇವೆ. ಬೇರೆಯವರಿಗಷ್ಟೇ ಅಲ್ಲ. ನಮಗೂ ಒಳ್ಳೆಯದಾಗುತ್ತದೆ, ಆದರೆ ನಮ್ಮ ದೃಷ್ಟಿ ಮಾತ್ರ ಬೇರೆಯವರ ಮೇಲೆಯೇ ನೆಟ್ಟಿರುತ್ತದೆ. ನಾವು ಈ ರೀತಿಯಾಗಿ ಸಕಾರಾತ್ಮಕವಾಗಿ ವಿಚಾರ ಮಾಡುತ್ತ ಹೋದಾಗ ಮತ್ತು ದುಡಿಯುತ್ತಾ ಹೋದಾಗ ಸಾಧನೆ, ಯಶಸ್ಸು, ಹೆಸರು, ಹಣ ಎನ್ನುವುದು ನಮ್ಮ ಹಿಂದೆ ಬೆನ್ನೇರಿ ಬರುತ್ತದೆ. ಕೆಲವೊಂದು ಸಾರಿ ಮಹಾತ್ಮರ ಜೀವನವನ್ನು ತಿಳಿದುಕೊಳ್ಳುವಲ್ಲಿ, ಅವರು ಹಾಕಿಕೊಟ್ಟ ಮಾರ್ಗದಲ್ಲಿ, ಅವರು ನಡೆದು ತೋರಿಸಿದ ರೀತಿಯನ್ನು ಅನುಸರಿಸುವಲ್ಲಿ, ಅವರ ಒಳ್ಳೆಯ ವಿಚಾರವನ್ನು ತಿಳಿದುಕೊಳ್ಳುವಲ್ಲಿ, ಎಡವಿ ಅದಕ್ಕೆ ವಿರುದ್ಧವಾಗಿ ಅರ್ಥಮಾಡಿಕೊಂಡು, ವಚನಗಳನ್ನು ತಪ್ಪು ತಪ್ಪು ತಿಳಿದುಕೊಂಡು, ವ್ಯಂಗ್ಯವಾಗಿ ಪೂರ್ವಗ್ರಹ ಪೀಡಿತರಾಗಿ ಜೀವನವನ್ನು ಹಾಳು ಮಾಡಿಕೊಂಡಿರುವವರನ್ನು ನಾವು ನೋಡುತ್ತಿದ್ದೇವೆ. ಇವರಿಗೆ ಸಕಾರಾತ್ಮಕ ವಿಚಾರ ಗೊತ್ತಿಲ್ಲದೆ ಇರುವುದರಿಂದ, ಅದಕ್ಕಾಗಿ ನಾವು ಹೇಗೆ ವಿಚಾರ ಮಾಡಿಕೊಳ್ಳಬೇಕು. ಯಾವ ರೀತಿ ಅರ್ಥಮಾಡಿಕೊಳ್ಳಬೇಕು. ಸಕಾರಾತ್ಮಕ ವಿಚಾರವನ್ನು ತೆಗೆದುಕೊಂಡು ನಕರಾತ್ಮಕ ಅನ್ಯ ವಿಚಾರವನ್ನು ಹೇಗೆ ಬಿಟ್ಟಿಕೊಡಬೇಕು ಎಂಬುದು. ನಮ್ಮ ದೇಶದ ಗೌರವಾನ್ವಿತ ಮಾಜಿ ರಾಷ್ಟ್ರಪತಿಗಳಾದ ಅಬ್ದುಲ್ ಕಲಾಂ ಅವರ ಜೀವನದ ಘಟನೆಯಿಂದ ನಮಗೆ ತಿಳಿದು ಬರುತ್ತದೆ.

ಒಮ್ಮೆ ಅವರು ಚಿಕ್ಕವರಿರುವಾಗ ಅವರು ಮತ್ತು ಅವರ ತಂಗಿ ಮನೆ ಮುಂದೆ ಆಟವಾಡುತ್ತಾ ಒಂದು ಗಿಡದ ಮೇಲೆ ಏರಿ ಕುಳಿತುಕೊಳ್ಳುತ್ತಾರೆ. ಒಂದು ಕೊಂಬೆಯಲ್ಲಿ ಕಲಾಂ, ಮತ್ತೊಂದು ಕೊಂಬೆಯಲ್ಲಿ ಅವರ ತಂಗಿ. ಆಗ ಇದ್ದಕ್ಕಿದ್ದಂತೆ ಜೋರಾಗಿ ಮಳೆಗಾಳಿ ಬೀಸಲು ಶುರು ಮಾಡುತ್ತೆ, ಆಗ ಅವರ ಅಪ್ಪ ಆಗ ತಾನೆ ಬಂದಿರುತ್ತಾನೆ. ಇವರಿಬ್ಬರು ಆ ಗಾಳಿ ರಭಸಕ್ಕೆ ಕೊಂಬೆ ಹಿಡಿದುಕೊಂಡು ತೂಗಾಡುತ್ತಾ, ಅಳುತ್ತಾ, ಚೀರುತ್ತಾ ಇರುತ್ತಾರೆ. ಆಗ ಅವರಪ್ಪ ಗಾಬರಿಯಿಂದ ಗಿಡದ ಮೇಲೆ ಕುಳಿತುಕೊಂಡಿರುವ ತಮ್ಮ ಮಕ್ಕಳ ಕಡೆ ನೋಡಿ ಕೂಗಿಕೊಳ್ಳುತ್ತಾನೆ. ಮಕ್ಕಳೇ, ಈಗ ಜೋರಾಗಿ ಗಾಳಿ ಬೀಸುತ್ತಾ ಇದೆ. ನೀವು ಈಗ ಧೈರ್ಯದಿಂದ ಹಿಡಿದುಕೊಂಡ ಕೊಂಬೆಯನ್ನು ಬಿಗಿಯಾಗಿ ಹಿಡಿದುಕೊಳ್ಳಿ, ಅಳಬೇಡಿ. ಇಲ್ಲವಾದರೆ ಅಲ್ಲಿಂದ ಬಿದ್ದು ಕೈ ಕಾಲು ಮುರಿದುಕೊಳ್ಳುತ್ತೀರಿ ಎಂದರಂತೆ. ಆಗ ಕಲಾಂ ಈ ಮಾತನ್ನು ಸಕಾರಾತ್ಮಕವಾಗಿ ಕೇಳಿಸಿಕೊಂಡು ಮತ್ತಿಷ್ಟು ಗಟ್ಟಿಯಾಗಿ ಕೊಂಬೆಯನ್ನು ಹಿಡಿದು ಕೊಂಡರಂತೆ. ಆದರೆ ಅವರ ತಂಗಿ ಮಾತ್ರ ಅವರಪ್ಪ ಹೇಳಿದ್ದು ಕೇಳಿ ಅಯ್ಯೋ ನಾನು ಇಲ್ಲಿಂದ ಈ ಕೊಂಬೆಯನ್ನು ಕೈ ಬಿಟ್ಟರೆ ಬಿದ್ದು ಕೈಕಾಲು ಮುರಿದು ಕೊಳ್ಳುತ್ತೇನೆಂದು ಹೆದರುತ್ತಾ ಗಾಬರಿಯಾಗಿ ನಕಾರಾತ್ಮಕವಾಗಿ ವಿಚಾರ ಮಾಡಿ ಅಧೈರ್ಯದಿಂದ ನಡುಗಿ ಕೈ ಬಿಟ್ಟಳಂತೆ. ಆಗ ಅವಳು ಅಲ್ಲಿಂದ ಬಿದ್ದು ಕಾಲು

ಮುರಿದುಕೊಂಡಳಂತೆ. ಅಂದಾಗ ಕಲಾಂ ಮತ್ತು ಅವರ ತಂಗಿಯ ಘಟನೆಯ ತೆಗೆದುಕೊಂಡಾಗ, ನಾವು ಹೇಗೆ ವಿಚಾರ ಮಾಡುತ್ತೇವೆಯೇ ಹಾಗೆಯೇ ನಮ್ಮ ಮನಸ್ಸು ಅದೇ ಮಾರ್ಗದಲ್ಲಿ ಹೋಗುತ್ತೆ. ಆದರೆ ಶರಣರೇ! ಶರಣರು, ಮಹಾತ್ಮರು ಹಾಕಿಕೊಟ್ಟ ಮಾರ್ಗ ಮಾತ್ರ ಸತ್ಯ. ತಿಳಿದುಕೊಳ್ಳುವಲ್ಲಿ ವ್ಯತ್ಯಾಸ ಮಾಡಿಕೊಂಡು ಕೆಲವು ಕುಹಕಿಗಳು ತಮ್ಮ ಧೂರ್ತತನದ ಪರಮಾವಧಿಯಿಂದ ಸಮಾಜವನ್ನು ಕೆಡಿಸುತ್ತಾರೆ.

ನಮ್ಮ ಜೀವನದ ಮೂಲ ಉದ್ದೇಶ ಸಂತೋಷದ, ಸಮಾಧಾನದ ಜೀವನ, ಶರಣ ಜೀವನ ಸಾಗಿಸುವುದು. ಆದರೂ ಕೆಲವರು ಅದಕ್ಕೆ ವಿರುದ್ಧ ದಿಕ್ಕಿನಲ್ಲಿರುತ್ತಾರೆ. ಶರಣ ಜೀವನವನ್ನು ಅಳವಡಿಸಿಕೊಳ್ಳಲು ಬಹಳ ಕಷ್ಟ ಪಡಬೇಕಾಗಿಲ್ಲ. ಅದು ನಮ್ಮ ಮನಸ್ಸಿನಲ್ಲಿಯೇ ಇದೆ. ಅಂತಹ ಮನಸ್ಸನ್ನು ಸಕಾರಾತ್ಮಕವಾದ ಯೋಚನೆಗಳಿಂದ ಸದಾ ಜಾಗೃತವಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಅಂದಾಗ ಮಾತ್ರ ಸಾಧ್ಯ. ಕೆಲವೊಂದು ಸಾರಿ ಅತೀ ಮನಸ್ತಾಪವಾಗಿ ನಮಗೆ ಏನು ಇಲ್ಲಪ್ಪಾ, ನಾವು ಹೇಗೆ ಬದುಕಬೇಕು. ನಮಗೆ ಯಾರು ಇದ್ದಾರೆ ಸಹಾಯ ಮಾಡುವವರು. ನಾವು ಒಂಟಿಯಾಗಿದ್ದೀವಿ ಎಂದು ಅವರಲ್ಲಿ ಅನಾಥಪ್ರಜ್ಞೆ ಕಾಡುತ್ತಾ ಇರುತ್ತೆ. ಅಂತಹ ಸಂದರ್ಭದಲ್ಲಿ ನಾವು ಸುಖಿಗಳೆಂದು ಭಾವಿಸಿಕೊಳ್ಳಬೇಕು. ಒಂದು ವೇಳೆ ನಾವು ಸುಖದಿಂದ ಇಲ್ಲವೆಂದು ಅನಿಸಿದಾಗಲೂ ಕೂಡಾ, ಪರಮಾತ್ಮ ಇಂತಹ ದೇಹವನ್ನು ದುಡಿಯುವ ಶಕ್ತಿಯನ್ನು, ಮಾತನಾಡುವ ಕಲೆಯನ್ನು, ಬದುಕಲು ಜಗತ್ತನ್ನು ಕೊಟ್ಟಿದ್ದಾನೆಯಲ್ಲವೆ. ಅದಕ್ಕೆ ನಮ್ಮಂತಹ ಪರಮ ಸುಖಿಗಳು ಯಾರು ಇಲ್ಲ ಎಂದುಕೊಳ್ಳಬೇಕು. ಆಗ ನಿಮಗೇನೆ ನಿಧಾನವಾಗಿ ಗೊತ್ತಾಗುತ್ತದೆ. ಅದಕ್ಕಾಗಿ ನಮಗಿಂತ ಕೈಕಾಲು ಕಳೆದುಕೊಂಡಿರುವವರು, ಕುರುಡ ಕುಂಟರ ನೋಡಿ ಅವರು ಆ ಸ್ಥಿತಿಯಲ್ಲಿದ್ದರೂ ಸಹಿತ ಅವರು ಯಾವುದಾದರೂ ರಂಗದಲ್ಲಿ ಸಾಧನೆ ಮಾಡಿರುತ್ತಾರೆ. ಭಿಕ್ಷುಕರು ಅವರಿಗೆ ಏನು ಇಲ್ಲ ಅಂದರೂ ಅವರು ಭಿಕ್ಷೆ ಬೇಡಿ ತಿಂದು ಎಷ್ಟು ಸಂತೋಷದಿಂದ ಇರುತ್ತಾರೆ. ಅಂದಾಗ ನಮಗೆ ಕಣ್ಣು ಕೈಕಾಲು ದುಡಿಯುವ ಶಕ್ತಿ ಇವೆಲ್ಲ ಇದ್ದು ಖಿನ್ನರಾಗುವುದುಬೇಡ. ನಾವು ಶರಣರು ಹೇಳಿದಂತೆ ಮನಸ್ಸಿಗೆ ಒಂದಿಷ್ಟು ಬುದ್ಧಿ ಹೇಳಿ ಪರಮಸುಖಿಗಳಾಗಿ ಸಕಾರಾತ್ಮಕವಾಗಿ ಸಾಗೋಣ. ನಮ್ಮ ಸಾಧನೆಯನ್ನು ಮುಂದುವರಿಸೋಣ. ಸಾಗುವ ಹಾದಿ ಸುಗಮವಾಗಲಿ ಯಾರ ಸಂಗದಿಂದ ನಮ್ಮ ಬದುಕು ಸುಗಮವಾಗುತ್ತೆ. ಯಾವ ಮಾರ್ಗ ಅನುಸರಿಸಿದರೆ ನಮ್ಮ ಜೀವನ ಹಸನಾಗುತ್ತೆ ಅನ್ನುವುದು ಮುಖ್ಯ. ಅದಕ್ಕೆ ಒಂದು ಕಡೆ ಸುಭಾಷಿತ ಹೇಳುತ್ತೆ.

"ಮಳೆನೀರು ಸಮುದ್ರದಲ್ಲಿ ಬಿದ್ದರೆ ಯಾರಿಗೂ ಗೊತ್ತಾಗುವುದಿಲ್ಲ. ಅದೇ ಅದು ಕಮಲದ ಎಲೆಯ ಮೇಲೆ ಬಿದ್ದರೆ ಮುತ್ತಿನಂತೆ ಹೊಳೆಯುತ್ತದೆ. ಆದ್ದರಿಂದ ನೀವು ಯಾವ ಜಾಗದಲ್ಲಿ ಹೊಳೆಯುತ್ತೀರೋ ಆ ಜಾಗವನ್ನು ಆಯ್ದುಕೊಳ್ಳುವುದು ಒಳ್ಳೆಯದು, ಅಂದಾಗ ಶರಣರೇ ನಾವು ಕೂಡಾ ಈ ಲೌಕಿಕ ಜೀವನ ಎಂಬ ಸಮುದ್ರದಲ್ಲಿ ಈ ವ್ಯವಹಾರಿಕ ಪ್ರಪಂಚದಲ್ಲಿ ಬಿದ್ದು ಹೋಗದೆ, ಗುರು ಬಸವಣ್ಣನವರು ಹಾಕಿಕೊಟ್ಟ ಲಿಂಗಾಯತ ಧರ್ಮದ ತಳಹದಿಯಲ್ಲಿ ಧರ್ಮವಂತರಾಗಿ ಲಿಂ. ಪರಮ ಪೂಜ್ಯ ಮಹಾ ಜಗದ್ಗುರು ಲಿಂಗಾನಂದ ಸ್ವಾಮೀಜಿಯವರ ಆಶೀರ್ವಾದದಿಂದ, ಪರಮ ಪೂಜ್ಯ ಮಹಾ ಜಗದ್ಗುರು ಮಾತಾಜಿಯವರೆಂಬ ಕಮಲದ ಸನ್ನಿಧಿಯಲ್ಲಿ ಬಸವ ಧರ್ಮಪೀಠದ ಜಾಗದಲ್ಲಿ ಮುತ್ತಿನಂತೆ ಹೊಳೆಯೋಣ. ತಡ ಏಕೆ ! ಬನ್ನಿ ಜೀವನವನ್ನು ಸಕಾರಾತ್ಮಕವಾಗಿ ಸಾರ್ಥಕ ಪಡಿಸಿಕೊಳ್ಳೋಣ.

ಭಾವನಿಂದೆ

–ಪೂಜ್ಯ ಶ್ರೀಮಾತೆ ಕಸ್ತೂರಿದೇವಿ

ತಾಳಮರದ ಕೆಳಗೆ ಒಂದು ಹಾಲ ಹರವಿಯಿದ್ದಡೆ
ಅದ ಹಾಲಹರವಿಯೆನ್ನರು ; ಸುರೆಯ ಹರವಿಯೆಂಬರು
ಈ ಭಾವನಿಂದೆಯ ಮಾಣಿಸಾ ಲಿಂಗದೇವಾ

– ಬ.ವ.ದೀ. – 95

ಸಮಾಜ ವಿಜ್ಞಾನಿ ಗುರುಬಸವಣ್ಣನವರ ಈ ಪುಟ್ಟ ವಚನ ತನ್ನ ಒಡಲಲ್ಲಿ ಅಪಾರವಾದ ಲೋಕಾನುಭವವನ್ನು ಅಡಗಿಸಿಕೊಂಡಿದೆ. ತನ್ಮೂಲಕ ಸಾಮಾಜಿಕ ಶಿಷ್ಟಾಚಾರವನ್ನು ಬೋಧಿಸುತ್ತಿದೆ. ಲೋಕದ ನಡುವಳಿಕೆ ಬಗ್ಗೆ ಎಚ್ಚರಿಕೆ ನೀಡುತ್ತಿದೆ. ಈ ವಚನದಲ್ಲಿ ಚಿಂತನೆಗೆ ಈಡು ಮಾಡುತ್ತಿರುವ, ಜೀವಾನಾನುಭವದ ನಿಘಂಟಿನಲ್ಲಿ ಮಾತ್ರ ದೊರೆಯುವ "ಭಾವನಿಂದೆ" ಎಂಬ ವಿಷಯದ ಬಗ್ಗೆ ಈಗ ತಿಳಿಯೋಣ.

ಗುರುಬಸವಣ್ಣನವರು ನಮ್ಮ ಮುಂದೆ ಒಂದು ಸ್ಪಷ್ಟವಾದ ವಚನ ಚಿತ್ರವೊಂದನ್ನು ಬಿಡಿಸುವ ಮೂಲಕ ಸಾಮಾಜಿಕ ಸನ್ನಡತೆಯ ಬಗ್ಗೆ ತಿಳುವಳಿಕೆ ನೀಡುತ್ತಿದ್ದಾರೆ. ಅದೇನೆಂದರೆ ತೆಂಗು, ಈಚಲ ಮರದ ಜಾತಿಗೆ ಸೇರಿದ ತಾಳೆ ಮರದ ಕೆಳಗೆ ಯಾರೋ ಅತಿ ಬುದ್ಧಿವಂತರು ಹಾಲಿನ ಹರವಿಯನ್ನಿರಿಸಿದ್ದಾರೆ. ಆದರೆ ಅದನ್ನು ನೋಡಿದ ಜನ "ಅದು ಹಾಲಿನ ಹರವಿಯಲ್ಲ; ಸುರೆಯ ಹರವಿ" ಎಂದು ಆಡಿಕೊಳ್ಳುತ್ತಿದ್ದಾರೆ. ಏಕೆಂದರೆ ಅವರ ಈ ತಪ್ಪುಗ್ರಹಿಕೆಗೆ ಕಾರಣ ಇಲ್ಲದಿಲ್ಲ. ತೆಂಗು, ತಾಳೆ, ಈಚಲ ಜಾತಿಯ ಮರಗಳ ಕಾಂಡಕ್ಕೆ ರಂಧ್ರ ಕೊರೆದು, ಅದಕ್ಕೆ ಒಂದು ಮಡಕೆ ಕಟ್ಟಿ ಕಾಂಡದಿಂದ ಒಸರುವ "ನೀರಾ" ಎಂಬ ರಸ (ದ್ರವ)ವನ್ನು ಸಂಗ್ರಹಿಸುತ್ತಾರೆ. ಈ ನೀರಾವನ್ನು ಸೂರ್ಯೋದಯಕ್ಕೆ ಮೊದಲೇ (ಸೂರ್ಯರಶ್ಮಿಗಳು ತಾಗುವ ಮೊದಲು) ಸೇವಿಸಿದರೆ ಆರೋಗ್ಯದಾಯಕ ಎಂಬ ನಂಬಿಕೆ ಇದೆ. ಇದೇ 'ನೀರಾ' ಎಂಬ ಪೇಯ ಸೂರ್ಯೋದಯದ ನಂತರ ಸುರೆಯಾಗಿ ಪರಿವರ್ತನೆ ಹೊಂದಿ ಮತ್ತೇರಿಸುವ ಗುಣ ಹೊಂದುತ್ತದೆ ಎಂಬುದು ಬಲ್ಲವರ ಮಾತು. ನಿಜಸ್ಥಿತಿ ಹೀಗಿರುವಾಗ ತಾಳೆಮರದ ಕೆಳಗಿರುವ ಹರವಿಯ ಒಳಗಿರುವುದು "ಹಾಲು" ಎಂಬ ಸತ್ಯವನ್ನು ತಿಳಿಯುವ/ಗ್ರಹಿಸುವ ವ್ಯವಧಾನವಾಗಲಿ, ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡುವ ಸದ್ಬುದ್ಧಿಯಾಗಲಿ, ಸಮಯವಾಗಲಿ ಎಷ್ಟು ಜನರಿಗೆ ಇರುತ್ತದೆ ?

ಈ ವಚನದ ಕೊನೆ ಸಾಲಿನಲ್ಲಿ "ಈ ಭಾವನಿಂದೆಯ ಮಾಣಿಸಾ ಲಿಂಗದೇವಾ" ಎಂದು ಪರಮಾತ್ಮನಲ್ಲಿ ಮೊರೆಯಿಡುವುದನ್ನು ಕಾಣುತ್ತೇವೆ. ಇಲ್ಲಿ ಭಾವನಿಂದೆ ಎಂದರೆ 'ಅಲ್ಲಿ ಇರುವುದೇ ಒಂದು; ಭಾವಿಸಿ, ಕಲ್ಪಿಸಿ, ಭ್ರಮಿಸಿಕೊಂಡು ಆರೋಪಿಸುವುದು ಮತ್ತೊಂದು" ಇಂಥ ಭಾವನಿಂದೆ ಮಾಡುವ ಹೀನ ಪ್ರವೃತ್ತಿಯಿಂದ ನನ್ನನ್ನು ಕಾಪಾಡು. ಮತ್ತೊಬ್ಬರ ಬಗ್ಗೆ ಅಪಪ್ರಚಾರ ಮಾಡುವ ಕೆಟ್ಟ ಸ್ವಭಾವವನ್ನು ತೊಡೆದುಹಾಕು ಎಂದು ಪರಮಾತ್ಮನಲ್ಲಿ ಮೊರೆಯಿಡುವ ಮೂಲಕ ಗುರುಬಸವತಂದೆಯವರು ಸಾಧಕರಿಗೆ ಭಾವನಿಂದೆಯಿಂದ ಮುಕ್ತನಾಗುವ ಮಾರ್ಗವನ್ನು ಸೂಚಿಸುತ್ತಿದ್ದಾರೆ. ಆದರೆ ಗುರು ಮತ್ತು ಪರಮಾತ್ಮನ ಕೃಪೆಯ ಫಲವಾಗಿ ಸಾಧಕನು ವೈಯಕ್ತಿಕವಾಗಿ ಅಪಪ್ರಚಾರ ಮಾಡುವುದರಿಂದ ಪಾರಾದರೂ, ಅಪ್ರಬುದ್ಧರು, ಅಜ್ಞಾನಿಗಳು, ಅಲ್ಪಮತಿಗಳಿಂದ ತುಂಬಿದ ಜಗತ್ತನ್ನು ಭಾವನಿಂದೆಯಿಂದ ಪಾರುಮಾಡುವುದಾಗಲಿ ಅಥವಾ ಪರಿವರ್ತನೆಯನ್ನು

ನಿರೀಕ್ಷಿಸುವುದಾಗಲಿ ಅಸಾಧ್ಯ. ಇದನ್ನೇ ಗುರು ಬಸವ ತಂದೆಯವರು ತಮ್ಮ ಒಂದು ವಚನದಲ್ಲಿ

ಲೋಕದ ಡೊಂಕ ನೀವೇಕೆ ತಿದ್ದುವಿರಿ!?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ

ಎಂದು ಉಪದೇಶಿಸಿರುವುದು. ಇದನ್ನರಿತು ಸದ್ಭಕ್ತನಾದವನು ತನ್ನ ಸಾಮಾಜಿಕ ನಡೆ-ನುಡಿಯ ಬಗ್ಗೆ ಎಚ್ಚರಿಕೆಯಿಂದಿರಬೇಕು. ತನ್ನ ಸುತ್ತ ಮುತ್ತ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿರುವ ಜಗತ್ತೊಂದು ಇದೆ ಎಂಬ ಪ್ರಜ್ಞೆ ಸದಾ ಜಾಗೃತವಾಗಿರಬೇಕು. ಇಂಥ ನೈತಿಕ ಭಯ ಇದ್ದಾಗ ಮಾತ್ರ ಸ್ವೇಚ್ಛಾವರ್ತನೆಗಳು ನಿಯಂತ್ರಣದಲ್ಲಿರುತ್ತವೆ. ಇಂಥ ಸಾಮಾಜಿಕ ಮೌಲ್ಯಗಳು ಕುಸಿದಿರುವ ಕಾರಣ 'ಸೋಶಿಯಲ್' ಎಂಬ ಹೆಸರಿನಲ್ಲಿ ಇಂದಿನ ಯುವಜನಾಂಗ ದಾರಿ ತಪ್ಪುತ್ತಿರುವುದು ಸರ್ವವಿದಿತವಾಗಿದೆ. ಸಾಮಾಜಿಕ ಸನ್ನಡತೆಯನ್ನು ಕಡೆಗಣಿಸಿ ಸ್ವೇಚ್ಛಾಚಾರಕ್ಕೆ ಮಹತ್ವ ಕೊಡುವುದರ ಮೂಲಕ ಸಾಮಾಜಿಕ ಸ್ವಾಸ್ಥ್ಯಕ್ಕೆ ಧಕ್ಕೆ ಉಂಟು ಮಾಡುತ್ತಿರುವುದು ಗೋಚರವಾಗುತ್ತಿದೆ. ಕುಟುಂಬಗಳಲ್ಲಿ ಅಶಾಂತಿ ನೆಲೆಗೊಳ್ಳುತ್ತಿದೆ. ಈ ಕಾರಣಕ್ಕಾಗಿಯೇ ಅನುಮಾನಾಸ್ಪದ, ಅಸಹಜ ವರ್ತನೆಗಳಿಂದ ಸಾಧಕನಾದವನು ದೂರವುಳಿದಾಗ ಮಾತ್ರ ಆಡಿಕೊಳ್ಳುವ ನಾಲಿಗೆಗಳು ನಿಯಂತ್ರಣದಲ್ಲಿರುತ್ತವೆ ಎಂಬುದು ಅನುಭವವೇದ್ಯ. ಮಾಡದಿರುವ ತಪ್ಪಿಗೆ ಅಪಪ್ರಚಾರದಿಂದ ಹೊರಬರಲು ಸಾಧಕನಿಗೆ ಅಸಾಮಾನ್ಯವಾದ ಆತ್ಮಸ್ಥೈರ್ಯ ಬೇಕಾಗುತ್ತದೆ. ದುರ್ಬಲ ಮನದ ಸಾಧಕನಾದರೆ ಅಪಪ್ರಚಾರ, ಅವಹೇಳನದಿಂದ ಚೇತರಿಸಿಕೊಳ್ಳಲಾರದೆ ಮೂಲೆಗುಂಪಾಗುತ್ತಾನೆ. ತಮ್ಮನ್ನು ನಂಬಿದ ಭಕ್ತನಿಗೆ ಈ ದುಃಸ್ಥಿತಿ ಬರಬಾರದೆಂಬುದೇ ಗುರುಬಸವಣ್ಣನವರ ಆಶಯ. ಆದ್ದರಿಂದ ಸಾಮಾಜಿಕ ಸನ್ನಡತೆ ಸಾಧಕನ ವ್ಯಕ್ತಿತ್ವ ವಿಕಾಸಕ್ಕೆ ಅತ್ಯಗತ್ಯ ಎಂದು ಸಮಾಜ ವಿಜ್ಞಾನಿ ಗುರು-ಬಸವಣ್ಣನವರು ತಮ್ಮ ವಚನದಲ್ಲಿ ಪ್ರತಿಪಾದಿಸಿದ್ದಾರೆ.

ಇದೇ ಸತ್ಯವನ್ನು ಜಗನ್ಮಾತಾ ಅಕ್ಕಮಹಾದೇವಿ ತಾಯಿಯವರು ಅನುಭವ ಮಂಟಪದಲ್ಲಿ ಅಲ್ಲಮಪ್ರಭುದೇವರು ತಮ್ಮನ್ನು ಸಂದರ್ಶಿಸಿದ ಸಂದರ್ಭದಲ್ಲಿ ಈ ರೀತಿ ಹೊರಗೆಡಹಿದ್ದಾರೆ. ದಿಗಂಬರೆಯಾಗಿ ಅನುಭವ ಮಂಟಪ ಪ್ರವೇಶಿಸಿದ ಮಹಾದೇವಿಯನ್ನು, ಪ್ರಭುದೇವರು: ನೀನು ಸೀರೆಯನ್ನು ತೆಗೆದೊಗೆದುದು ವೈರಾಗ್ಯವೇ ಸರಿ ! ಅದರ ಬಗ್ಗೆ ನಮಗೆ ಆತಂಕ ಉಳಿದಿಲ್ಲ. ಆದರೆ ಸೀರೆಯನ್ನು ಬಿಸುಟಿದ ವೈರಾಗ್ಯನಿಧಿ ಪುನಃ ಕೂದಲ ತೆರೆಯಿಂದ ಗೌಣೇಂದ್ರಿಯಗಳನ್ನು ಮುಚ್ಚುವ ಪ್ರಯತ್ನ ಮಾಡುತ್ತಿರುವೆಯೇಕೆ ?

ಮಹಾದೇವಿ : ಅಹುದು ಕೂದಲನ್ನು ಮರೆಮಾಡಿದುದಕ್ಕೆ ಪ್ರಬಲ ಕಾರಣವಿದೆ. ನನಗಾಗಿ ಅಲ್ಲ, ನಿಮ್ಮಂತಹವರಿಗಾಗಿ. ಎಲ್ಲರೂ ನಿಮ್ಮಂತಹ ಪರಿಪಕ್ವಾವಸ್ಥೆಯಲ್ಲೆ ಇರುವುದಿಲ್ಲ ; ಅರ್ಧಂಬರ್ಧ ಸಿದ್ಧಪುರುಷರಾದ ಸಾಧಕರೂ ಈ ಅನುಭವ ಮಂಟಪದಲ್ಲಿರಬಹುದು. ಅಂಥವರು ಗೌಣೇಂದ್ರಿಯಗಳನ್ನು, ಮನೋವಿಕಾರದ ಹೇತುವಾದ ಕಾಮನ ಮುದ್ರೆಯನ್ನು ಕಂಡು ಕ್ಷೋಭೆಗೊಳ್ಳಬಾರದು ಎಂಬ ಮುನ್ನೆಚ್ಚರಿಕೆಯಿಂದ ಇತತರಿಗಾಗಿ ಮುಚ್ಚಿರುವೆ, ಇದರ ಬಗ್ಗೆ ತಾವು ತಪ್ಪು ತಿಳಿಯುವ ಪ್ರಮೇಯವೇ ಇಲ್ಲ".

ಶರಣ ಬಂಧುಗಳೇ, ಗುರುಬಸವಣ್ಣನವರ ಮತ್ತು ಜಗನ್ಮಾತಾ ಅಕ್ಕಮಹಾದೇವಿಯವರ ಜೀವನಾನುಭವದಿಂದ ನಾವು ಪಾಠ ಕಲಿಯೋಣ. ಮತ್ತೊಬ್ಬರಿಗೂ ಕಲಿಸೋಣ. ಸಮಾಜವನ್ನು ನೈತಿಕ ಮೌಲ್ಯಗಳಿಂದ ತುಂಬುವ ಪ್ರಯತ್ನ ಮಾಡೋಣ. ಸಾಮಾಜಿಕ ಸನ್ನಡತೆಗಳನ್ನು ರೂಢಿಸಿಕೊಳ್ಳೋಣ.

ಉದಾರ ದೇಣಿಗೆಗಾಗಿ ಮನವಿ

ಶರಣ ಬಂಧುಗಳೇ,

ಶರಣ ಭೂಮಿ ಬಸವ ಕಲ್ಯಾಣದಲ್ಲಿ ರೂಪುಗೊಳ್ಳುತ್ತಿರುವ 108 ಅಡಿ ಪುತ್ಥಳಿಯ ಕೆಲಸವು ಭರದಿಂದ ಸಾಗಿದೆ. ಒಂದೂವರೆ ಕೋಟಿ ರೂಗಳ ವೆಚ್ಚದ ಅಂದಾಜಿನೊಡನೆ ಪ್ರಾರಂಭವಾದ ಮೂರ್ತಿಯ ವೆಚ್ಚ ಈಗಾಗಲೇ 3 ಕೋಟಿ ದಾಟಿದೆ. ಇದಕ್ಕೆ ಪೋಷಕವಾಗಿ ಕೆಲವು ಖರ್ಚುಗಳು ಬರುತ್ತವೆ ಕೆಲಸ ಆರಂಭಿಸಿದಾಗ ಇದ್ದ ಸಿಮೆಂಟ್, ಕಬ್ಬಿಣದ ರೇಟು ಮೂರುಪಟ್ಟು ಹೆಚ್ಚಿದೆ. ಮೂರ್ತಿಯ ಆಕಾರ ಸ್ಪಷ್ಟ ರೂಪ ತಾಳುತ್ತಲಿದೆ. ಮೂರ್ತಿಯ ಕೆಲಸದ ಜೊತೆಗೆ ಅದರ ಮುಂಭಾಗದ ಕೆಲಸ, ಏರುವ ಮತ್ತು ಇಳಿಯುವ ಮೆಟ್ಟಿಲುಗಳ ಕೆಲಸ, ಮುಂದಿನ ಐಕ್ಯ ಮಂಟಪದ ಕೆಲಸ, ಜೊತೆ ಜೊತೆಗೆ ಬಸವ ಧ್ಯಾನ ಮಂಟಪ ಗವಿ, ಅಕ್ಕಮಹಾದೇವಿ ಗವಿ- ಇವುಗಳ ಕೆಲಸವೂ ಭರದಿಂದ ಸಾಗಿದೆ. ಹೀಗಾಗಿ ಹಣದ ಅವಶ್ಯಕತೆ ಬಹಳವಾಗಿದೆ.

1. ಶರಣ ಬಂಧುಗಳೇ ಸಾಧ್ಯವಾದಷ್ಟೂ ಕಾಣಿಕೆಯ ರೂಪದಲ್ಲಿ ನಿಮ್ಮ ಉದಾರವಾದ ದೇಣಿಗೆಯನ್ನು ಕೊಡಿರಿ. ಶರಣ ಮೇಳಕ್ಕೆ ಬರುವಾಗ ತನ್ನಿರಿ.

2. ಶರಣ ಮೇಳದ ದೇಣಿಗೆ ಸಂಗ್ರಹವನ್ನು ನಿಷ್ಠೆಯಿಂದ ಮಾಡಿರಿ. ಕಾರಣಾಂತರದಿಂದ ರಸೀತಿ ಪುಸ್ತಕ ಬಂದಿಲ್ಲದಿದ್ದರೆ ಫೋನ್ ಮಾಡಿ ರಸೀತಿ ಪುಸ್ತಕ ತರಿಸಿಕೊಂಡು ನಿಷ್ಠೆಯಿಂದ ಸಂಗ್ರಹಿಸಿರಿ. ಎಲ್ಲರೂ ನಿಷ್ಠೆಯಿಂದ ಜೋಪಾನವಾಗಿ ಖರ್ಚುಮಾಡುವ ಹಂಬಲ ಉಳ್ಳ ಪ್ರಾಮಾಣಿಕರು. ಜೋಪಾನವಾಗಿ, ಮಿತವಾಗಿ ಖರ್ಚುಮಾಡಿ ಉಳಿಯುವ ಹಣವನ್ನು ಕಟ್ಟಡನಿಧಿಗೆ, 108 ಅಡಿ ಮೂರ್ತಿಗಾಗಿ ಬಳಸಿಕೊಳ್ಳಲಾಗುವುದು.

3. ಮೆಟ್ಟಿಲು ಯೋಜನೆ: ಏರಲು 108; ಇಳಿಯಲು 108 ಮೆಟ್ಟಿಲು ಮಾಡಲಾಗುತ್ತಿದೆ. 10 ಅಡಿ ಉದ್ದದ ಮೆಟ್ಟಿಲಿಗೆ ಗ್ರಾನೈಟ್ ಹಾಕಿಸಲಾಗುವುದು. ಒಂದು ಮೆಟ್ಟಿಲಿಗೆ 15 ಸಾವಿರ ರೂ ಖರ್ಚು ಬರುವುದು. ಈ ಮೊತ್ತ ಕೊಟ್ಟ ದಾನಿಗಳ ಹೆಸರನ್ನು ಮೆಟ್ಟಿಲಿನ (ನಿಲ್ಲಿಸಿದ ಭಾಗ) ಮೇಲೆ ಕೆತ್ತಿಸಲಾಗುವುದು.

4. ಬಸವ ಧ್ಯಾನ ಮಂಟಪದ ಗವಿಯೊಳಗೆ ಪುನಃ ಒಳಗವಿಗಳನ್ನು ಮಾಡಲಾಗಿದ್ದು ಅಲ್ಲಿ ಪ್ರಮುಖ ಶರಣರ ಮೂರ್ತಿಗಳನ್ನು ಇರಿಸಲಾಗಿದೆ. ಈ ಒಳಗವಿಗಳಿಗೆ ಗ್ರಾನೈಟ್ ಕಲ್ಲಿನ ಬಾಗಿಲ ವಾಡವನ್ನು ಕೂರಿಸಲಾಗುತ್ತಿದೆ. ಕಲ್ಲಿನ ಬಾಗಿಲುವಾಡ ಒಂದಕ್ಕೆ 25000 (ಇಪ್ಪತ್ತೈದು ಸಾವಿರ) ರೂ ವೆಚ್ಚತಗುಲಿದೆ. 25000 ಕೊಟ್ಟವರ ಹೆಸರನ್ನು ಬಾಗಿಲುವಾಡದ ಮೇಲೆ ಕೆತ್ತಿಸಲಾಗುವುದು.

5. ವಿಶ್ವಕಲ್ಯಾಣ ಮಿಷನ್, ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಬೆಂಗಳೂರು, ಧಾರವಾಡ, ಕೂಡಲ ಸಂಗಮ, ಬಸವ ಕಲ್ಯಾಣ, ಬೀದರ - ಈ 5 ಸ್ಥಳಗಳಲ್ಲಿ ಅನಾಥಾಲಯಗಳು, ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಅನಾಥಾಲಯ, ವೃದ್ಧಾಶ್ರಮ ನಡೆಸಲಾಗುತ್ತಿದೆ. ಮಾನವೀಯ ದೃಷ್ಟಿಯಿಂದ ಆರ್ಥಿಕ ಸಹಾಯ ಮಾಡಲು ಅವಕಾಶ ಉಂಟು.

6. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟಿಗೆ 80 ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿ ಇದೆ. ಅಗತ್ಯವಿರುವವರು ಉಪಯೋಗಿಸಿಕೊಳ್ಳಬಹುದು.

ತಮ್ಮ ತಮ್ಮ ಶಕ್ತ್ಯಾನುಸಾರ ಬಸವ ಧರ್ಮ ಪೀಠದ ಕಾರ್ಯಗಳಿಗೆ, ಕಟ್ಟಡ ನಿರ್ಮಾಣಕ್ಕೆ ಕಾಣಿಕೆಯನ್ನು ಸಲ್ಲಿಸಲು ಮನಸ್ಸು ಮಾಡಬೇಕೆಂದು ಶರಣ ಬಂಧುಗಳಲ್ಲಿ ವಿನಂತಿ.

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ


ಪ್ರಾರೂಪ 4 (ವಿಧಿ 8)

1.	ಪ್ರಕಟಣೆಯ ಸ್ಥಳ	ಬೆಂಗಳೂರು
2.	ಪ್ರಕಟಣೆಯ ನಿಯತಕಾಲಿಕತೆ	ಮಾಸಿಕ
3.	ಮುದ್ರಕರ ಹೆಸರು	ಶ್ರೀಮತಿ ಕಮಲಮ್ಮ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಪದ್ಮಶ್ರೀ ಪ್ರಿಂಟರ್ಸ್ ರಾಜಾಜಿನಗರ, ಬೆಂಗಳೂರು
4.	ಪ್ರಕಾಶಕರ ಹೆಸರು	ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ ?	ಹೌದು
	ವಿಳಾಸ	ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ, ರಾಜಾಜಿನಗರ ಬೆಂಗಳೂರು - 560010
5.	ಸಂಪಾದಕರ ಹೆಸರು	ಪೂಜ್ಯ ಶ್ರೀಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಬಸವ ಮಂಟಪ, ರಾಜಾಜಿ ನಗರ ಬೆಂಗಳೂರು - 560010
6.	ಪತ್ರಿಕೆ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳ	ವಿಶ್ವಕಲ್ಯಾಣ ಮಿಷನ್ (ರಿಜಿಸ್ಟರ್ಡ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್)
	ಶೇ.1.ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	ಬಸವ ಮಂಟಪ ರಾಜಾಜಿ ನಗರ, ಬೆಂಗಳೂರು-560010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನಂಬಿಕೆಯಂತೆ ನಿಜವೆಂದು ನಾನು ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ ಘೋಷಿಸುತ್ತೇನೆ.

ಕಲ್ಯಾಣ ಕಿರಣ, ದಿ.03-3-2011


ಪ್ರಕಾಶಕರು
ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಬೆಂಗಳೂರು -560010



2011 ರ ಪ್ಯಾಕೇಟ್ ಕ್ಯಾಲೆಂಡರ್ ಬಿಡುಗಡೆ




ಶರಣ ಮಂಜುನಾಥ್ ಕೂನ್ನೂರ್ ಅವರಿಂದ ಬಸವ ಕ್ಯಾಲೆಂಡರ್ ಬಿಡುಗಡೆ






ಪೂಜ್ಯ ಗಂಗಾಮಾತಾಜಿಯವರಿಂದ ಬಸವ ಧ್ವಜಾರೋಹಣ




ಬಸವ ಧರ್ಮ ಪೀಠದ ಅನಾಥಾಲಯದ ಮಕ್ಕಳಿಂದ ನೃತ್ಯ



ಕೂಡಲ ಸಂಗಮದ ಅನಾಥಾಲಯದ ಮಕ್ಕಳಿಂದ ಕೋಲಾಟ ನೃತ್ಯ



ಶರಣ ಮೇಳದ ಬಸವ ಧ್ವಜಾರೋಹಣದಲ್ಲಿ ಭಾಗಿಯಾದ ಶರಣರು



ಸಾಮೂಹಿಕ ಪ್ರಾರ್ಥನಾ ವೇದಿಕೆ



ಲಿಂಗಾಯತ ಧರ್ಮ ಜಾಗೃತಿ ಸಮಾವೇಶದ ರ್‍ಯಾಲಿನಲ್ಲಿ
ಪೂಜ್ಯ ಗಂಗಾಮಾತಾಜಿ ಮತ್ತು ಜಂಗಮ ಮೂರ್ತಿಗಳು



ಲ್ಯಾಂಬ್ರೆತ್ (ಇಂಗ್ಲೆಂಡ್) ಮೇಯರ್ ಡಾ॥ ನೀರಜ್ ಪಾಟೀಲರಿಗೆ
ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ ಸತ್ಕಾರ

CPMG/KA/BGW-50/2009-2012 WPP (W) - 17 R.No. 1998



ಕೇಂದ್ರ ಸರ್ಕಾರದ ರೇಲ್ವೆ ಖಾತೆಯ ರಾಜ್ಯ ಸಚಿವರಾದ
ಶರಣ ಕೆ.ಹೆಚ್. ಮುನಿಯಪ್ಪ ಅವರಿಂದ ಶರಣ ಮೇಳ ಉದ್ಘಾಟನೆ



ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ನಾಡೋಜ